42nd Year of Publication. Phone: 3728

ವಾರ್ಷಿಕ ಚಂದಾ

ರೂ. 12—50.

ಪ್ರಭಾತ

ಬೆಲೆ

20

ಪೈಸೆ.

ಸಂಪುಟ: ೪೨. ಸಂಚಿಕೆ: ೩೪. | ಸಂಪಾದಕ: ಕುಡ್ವ ವಾಸುದೇವ ಶೆಣೈ. ರವಿವಾರ ತಾ. 26—9—1976 | VOL. 42. No. 34.

ಮಂಗಳೂರಿನ ಸಾರ್ವಜನಿಕ ಶ್ರೀ ಶಾರದಾ ಮಹೋತ್ಸವ

ಮಂಗಳೂರು ನಗರದ ಅತ್ಯಂತ ವೈಭವಯುಕ್ತ ಮಹೋತ್ಸವವಾದ ಸಾರ್ವಜನಿಕ ಶ್ರೀ ಶಾರದಾ ಮಹೋತ್ಸವವು, ವರ್ಷಂಪ್ರತಿಯಂತೆ ತಾ. 29–9–76 ರಿಂದ 4–10–76ರ ವರೆಗೆ ಜರಗುವುದು.

ತಾ. 29–9–76ನೇ ಬುಧವಾರ ರಾತ್ರಿ ಶ್ರೀ ಶಾರದಾಮಾತೆಯ ಪ್ರತಿಷ್ಠೆ; ಶ್ರೀ ಶಾರದಾಮಾತೆಯ ವಿಗ್ರಹವನ್ನು ದರ್ಬಾರ ಬೀಡಿ ಫೇಕ್ಟರಿಯಿಂದ ಅಂದು ರಾತ್ರಿ 9ಕ್ಕೆ, ಮುಖ್ಯಪ್ರಾಣ ದೇವಸ್ಥಾನ ರಸ್ತೆ, ರಥಬೀದಿಯಾಗಿ ಆಚಾರ್ಯ ಮಠಕ್ಕೆ ತಂದು ಪ್ರತಿಷ್ಠಿಸಲಾಗುವುದು.

ತಾ. 30–9–76ನೇ ಗುರುವಾರದಿಂದ ತಾ. 3–10–76ರ ವರೆಗೆ ಪ್ರತಿ ದಿನ ಸಾಯಂಕಾಲ 4ರಿಂದ, ಮತ್ತು ತಾ. 4–10–76ರಂದು ಸಾಯಂಕಾಲ 5-30 ರಿಂದ ಶ್ರೀ ಶಾರದೆಯ ದರ್ಶನ ಪಡೆಯಬಹುದು.

ತಾ. 3-10-76ನೇ ರವಿವಾರ ರಾತ್ರಿ 8-30ಕ್ಕೆ ವಿಸರ್ಜನೆ ಪೂಜೆ; ತಾ. 4–10–76ನೇ ಸೋಮವಾರ ರಾತ್ರಿ 8-30ಕ್ಕೆ ಶ್ರೀ ಶಾರದಾ ವಿಗ್ರಹದ ಸಾರ್ವಜನಿಕ ಮೆರವಣಿಗೆ ನಡೆದು, ನಡುರಾತ್ರಿ ಶ್ರೀ ಮಹಾಮಾಯಿ ದೇವಸ್ಥಾನದ ತೀರ್ಥದಲ್ಲಿ ವಿಲೀನಗೊಳಿಸಲಾಗುವುದು.

— —

ಕಟೀಲಿನಲ್ಲಿ ನವರಾತ್ರಿ ಪೂಜಾಮಹೋತ್ಸವ

ಕಟೀಲು ಶ್ರೀ ದುರ್ಗಾಪರಮೇಶ್ವರೀ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆದುಬರುವ ನವರಾತ್ರಿ ಮಹೋತ್ಸವವು, ಇದೇ ತಾ. 24–9–76ನೇ ಶುಕ್ರವಾರ (ಆಶ್ವೀಜ ಪಾಡ್ಯ ಶು। ೧ರಂದು) ಆರಂಭವಾಗಿದ್ದು, ತಾ. 2-10-76ನೇ ಆಶ್ವೀಜ ಶು। ನವಮಿ ತನಕ ಜರಗುವುದು. (ತಾ. 28ನೇ ಸೋಮವಾರ ಲಲಿತಾ ಪಂಚಮಿ; ತಾ. 30ರಂದು ಮೂಲಾನಕ್ಷತ್ರ; ತಾ. 1-10-76ನೇ ಶುಕ್ರವಾರ ದುರ್ಗಾಷ್ಟಮಿ; ತಾ. 2–10–76ನೇ ಶನಿವಾರ ಮಹಾನವಮಿ).

— —

ಸಾರಿಗೆ ಸಪ್ತಾಹ

ದಕ್ಷಿಣ ಕನ್ನಡ ಜಿಲ್ಲಾ ಪೋಲೀಸರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾ. 20ರಿಂದ 26ರ ತನಕ ಸಾರಿಗೆ ಸಪ್ತಾಹ ಆಚರಿಸಿದರು.

ನಿಧನ



ಉಡುಪಿಯ ಹಿರಿಯ ಸರ್ವೋದಯ ಕಾರ್ಯಕರ್ತರೂ ಸಮಾಜಸೇವಕರೂ ಆದ ಶ್ರೀ ಕಾಡುಬೆಟ್ಟು ಶ್ರೀನಿವಾಸ ಪೈ ('ಖದ್ದರ್ ಶ್ರೀನಿವಾಸ ಪೈ') ಅವರು ತಾ. 16ರಂದು ರಾತ್ರಿ, ಮುಂಬಯಿಯಲ್ಲಿ ನಿಧನರಾದರು. ಮರಣಕಾಲಕ್ಕೆ ಅವರಿಗೆ 85 ವರ್ಷಗಳಾಗಿದ್ದುವು.

ಧೀರನು ಮಾತ್ರ ನಿರಹಂಕಾರಿಯಾಗಬಲ್ಲನು

ನ ಜಾತು ಹ್ಯಷ್ಯೇನ್ಮಹತಾ ಧನೇನ
ವೇದಾನಧೀಯೀತಾನಹಂಕೃತಃ ಸ್ಯಾತ್ ।
ನಾನಾಭಾವಾ ಬಹವೋ ಜೀವಲೋಕೇ
ದೈವಾಧೀನಾ ನಷ್ಟಚೇಷ್ಟಾಧಿಕಾರಾಃ ।
ತತ್ತತ್ಪ್ರಾಪ್ಯ ನ ವಿಹನ್ಯೇತ ಧೀರೋ
ದಿಷ್ಟಂ ಬಲೀಯ ಇತಿ ಮತ್ವಾತ್ಮಬುದ್ಧ್ಯಾ ॥

— ಮಹಾಭಾರತ.

ಅಪಾರವಾದ ಐಶ್ವರ್ಯವಿದ್ದರೂ ಹಿಗ್ಗಬಾರದು. ವೇದಗಳ ಅಧ್ಯಯನಮಾಡಬೇಕು. ಆದರೆ, ತಾನು ವೇದವಿದ್ಯಾಪಾರಂಗತನೆಂದು ಅಹಂಕಾರಪಡಬಾರದು. ಈ ಜಗತ್ತಿನಲ್ಲಿ ವಿಧವಿಧವಾದ ಸ್ವಭಾವಗಳಿಂದ ಕೂಡಿದ ಜನರಿದ್ದಾರೆ. ಅವರೆಲ್ಲರೂ ಕೇವಲ ದೈವಕ್ಕೆ ಅಧೀನರಾಗಿರುತ್ತಾರೆ. ದೈವದ ಮುಂದೆ ಅಥವಾ ಅದೃಷ್ಟದ ಮುಂದೆ ಅವರ ದುರಹಂಕಾರ, ದುರಭಿಮಾನ, ಅಧಿಕಾರ, ಮದ—ಇವಾವುಗಳೂ ಕೆಲಸಕ್ಕೆ ಬಾರವು. ದೈವವು ಕ್ಷಣಮಾತ್ರದಲ್ಲಿ ಎಲ್ಲವನ್ನೂ ವಿನಾಶಮಾಡಿಬಿಡಬಲ್ಲುದು. ಆದುದರಿಂದ, ಧೀರನಾದವನು ಐಶ್ವರ್ಯವನ್ನು ಹೊಂದಿದ್ದರೂ, ವಿದ್ಯಾವಂತನಾಗಿದ್ದರೂ, ಬಲಿಷ್ಠನಾಗಿದ್ದರೂ, ಅನೇಕ ಯಜ್ಞ–ಯಾಗಾದಿಗಳನ್ನು ಮಾಡಿದ್ದರೂ ಸಹ ಅಹಂಕಾರಪಡಬಾರದು. 'ಅದೃಷ್ಟವೆಂಬುದು ಬಲವತ್ತರವಾದುದು" ಎಂಬುದನ್ನು ಆತ್ಮವಿವೇಚನೆಯಿಂದ ನಿರ್ಧರಿಸಿಕೊಂಡು ಅಹಂಕಾರವನ್ನು ದೂರಮಾಡಬೇಕು. ಕಷ್ಟಗಳು ಒದಗಿದಾಗ ಕುಗ್ಗಲೂ ಬಾರದು.

(ತನ್ನ ಅಹಂಕಾರದ ಕಾರಣದಿಂದ ಸತ್ಕರ್ಮದಲ್ಲಿ ನ್ಯೂನತೆಯುಂಟಾಗಿ ಸ್ವರ್ಗದಿಂದ ತಳ್ಳಲ್ಪಟ್ಟ ಯಯಾತಿಯು, ರಾಜರ್ಷಿ ಮತ್ತು ಪರಮಧಾರ್ಮಿಕನಾದ ಅಷ್ಟಕನಿಗೆ ಹೇಳಿದ ನುಡಿಗಳು.)

'ದಕ್ಷತೆ, ಬುದ್ಧಿಮತ್ತೆಯಲ್ಲಿ ನಮ್ಮ ಬ್ಯಾಂಕುಗಳು ಹಿಂದಿಲ್ಲ!'

"ಭಾರತೀಯ ಬ್ಯಾಂಕುಗಳು ವಿಶ್ವದ ಇತರ ಯಾವುದೇ ಬ್ಯಾಂಕುಗಳಿಗಿಂತ ಹಿಂದೆ ಇಲ್ಲ. ದಕ್ಷತೆ, ಬುದ್ಧಿಮತ್ತೆ ಮತ್ತು ದುಡಿಮೆಗಳಲ್ಲಿ ಜಗತ್ತಿನ ಇತರ ಬ್ಯಾಂಕರರುಗಳಿಗೆ ನಮ್ಮವರು ಸಾಟಿಯಾಗಬಲ್ಲರು." ಇದು 40 ದಿನಗಳ ಪಾಶ್ಚಾತ್ಯ ಹಾಗು ಪೌರ್ವಾತ್ಯ ರಾಷ್ಟ್ರಗಳ ಪ್ರವಾಸ ಮುಗಿಸಿ ಹಿಂತೆರಳಿದ ಸಿಂಡಿಕೇಟ್ ಬ್ಯಾಂಕಿನ ಚೆಯರ್ಮ್ಯಾನ್ ಶ್ರೀ ಕೆ. ಕೆ. ಪೈಯವರ ಅಭಿಪ್ರಾಯ. ಮಣಿಪಾಲದಲ್ಲಿ ಕಳೆದ ತಾ. 16ರಂದು ತಮ್ಮ ಪ್ರವಾಸಾನುಭವಗಳನ್ನು ಬ್ಯಾಂಕಿನ ಅಧಿಕಾರಿಗಳಿಗೆ ತಿಳಿಯಪಡಿಸುವಾಗ ಇದನ್ನವರು ಹೇಳಿದರು.

ಮಂಗಳೂರು ಆಕಾಶವಾಣಿ ಡೈರೆಕ್ಟರ್

ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ ಕಮರ್ಶಲ್ ಸ್ಟೇಶನ್ ಡೈರೆಕ್ಟರರಾಗಿರುವ ಶ್ರೀ ಎಸ್. ಕೃಷ್ಣಮೂರ್ತಿಯವರನ್ನು ಹಂಗಾಮಿಯಾಗಿ ಮಂಗಳೂರು ಆಕಾಶವಾಣಿ ಕೇಂದ್ರದ ಸ್ಟೇಶನ್ ಡೈರೆಕ್ಟರರಾಗಿ ನೇಮಿಸಲಾಗಿದೆಯೆಂದು ತಿಳಿದುಬಂದಿದೆ

ರಾಷ್ಟ್ರೀಯ ಸ್ಮಾರಕವಾಗಿ ಸೈಂಟ್ ಮೇರೀಸ್ ದ್ವೀಪ

ಮಲ್ಪೆ ಸಮೀಪದ ಸೈಂಟ್ ಮೇರೀಸ್ ದ್ವೀಪ 'ರಾಷ್ಟ್ರೀಯ ಭೂವೈಜ್ಞಾನಿಕ ಸ್ಮಾರಕ'ವಾಗಿ ಘೋಷಿಸಲ್ಪಡಲಿದೆ. ಈ ವರ್ಷದ ನವೆಂಬರ್ ವೇಳೆಗೆ ಈ ಸಂಬಂಧ ಪ್ರಕಟಣೆಯನ್ನು ನಿರೀಕ್ಷಿಸಲಾಗಿದೆ.

ಬಿಲ್ಲವರ ಯೂನಿಯನಿಗೆ ಮಹಿಳಾ ವಿಭಾಗ

ಕುದ್ರೋಳಿಯ ಬಿಲ್ಲವರ ಯೂನಿಯನಿನ ಮಹಿಳಾ ವಿಭಾಗದ ಉದ್ಘಾಟನೆಯು ಇತ್ತೀಚೆಗೆ ಶ್ರೀಮತಿ ಕಲ್ಯಾಣಿ ಮೈಂದನ್ ಅವರಿಂದ ಜ್ಯೋತಿ ಬೆಳಗಿಸುವುದರ ಮೂಲಕ ನಡೆಯಿತು.

ಮಹಿಳೆಯರಿಗೆ ಕ್ರಿಕೆಟ್ ತರಬೇತಿ

'ಸಿಟಿ ಕ್ರಿಕೆಟರ್ಸ್' ನೇತೃತ್ವದಲ್ಲಿ ಮಂಗಳೂರಲ್ಲಿ ಮೊತ್ತಮೊದಲ ಬಾರಿಗೆ ಮಹಿಳೆಯರ ಕ್ರಿಕೆಟ್ ತರಬೇತಿ ತಾ.22ರಿಂದ ಆರಂಭವಾಗಿ, ನೆಹರೂ ಮೈದಾನಿನಲ್ಲಿ ದಿನಂಪ್ರತಿ 8ರಿಂದ 9-30ರ ವರೆಗೆ ನಡೆಯುತ್ತದೆ.

ಶ್ರೀ ಲಂಕೆಗೆ ಮಂಗಳೂರಿನ ಫೈಬರ್ ಗ್ಲಾಸ್ ದೋಣಿಗಳು

ಮಂಗಳೂರಲ್ಲಿ ನಿರ್ಮಾಣವಾಗುತ್ತಿರುವ 38 ಅಡಿ ಉದ್ದದ "ಫೈಬರ್ ಗ್ಲಾಸ್" ಮೀನುಗಾರಿಕಾ ದೋಣಿಗಳನ್ನು ಶ್ರೀ ಲಂಕೆಗೆ ಕಳಿಸುವುದರ ಬಗ್ಗೆ ವರ್ಷಾರಂಭದಲ್ಲಿ ಒಪ್ಪಂದವಾಗಿದ್ದು, ಪ್ರತಿ ತಿಂಗಳಿಗೂ ಅಲ್ಲಿಗೆ ಮಂಗಳೂರಿಂದ ಮೂರು ಮೀನುಗಾರಿಕಾ ದೋಣಿಗಳು ಹೋಗುತ್ತಿವೆ ಎಂಬುದನ್ನು ಶ್ರೀ ಲಂಕೆಯ ಗಾಲೆ ಎಂಬಲ್ಲಿ ಏಷ್ಯಾಭಿವೃದ್ಧಿ ಬ್ಯಾಂಕಿನ 31 ಮಿಲಿಯ ಡಾಲರ್ ನೆರವು ಪೂರೈಕೆಯ ಯೋಜನೆಯ ನಿರ್ದೇಶಕ ಶ್ರೀ| ಆರ್. ಎ. ಡಿ. ಸಿಲ್ವರು ಮಂಗಳೂರಲ್ಲಿ ತಿಳಿಸಿದರು. (ಪ್ರತಿಯೊಂದು ಮೀನುಗಾರಿಕಾ ದೋಣಿಯ ಬೆಲೆ ಸುಮಾರು 4 ಲಕ್ಷ ರೂಪಾಯಿ).

ಜಿಲ್ಲೆಯಲ್ಲಿ 1,544 ಗುಡಿಸಲುಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮನೆಯಿಲ್ಲದ ಬಡವರಿಗೆ ಮನೆ ಒದಗಿಸುವ ಉದ್ದೇಶವಿಟ್ಟುಕೊಂಡು ಪ್ರಾಯೋಗಿಕವಾಗಿ 1,544 ಗುಡಿಸಲುಗಳನ್ನು ನಿರ್ಮಿಸುವ ವಿಶೇಷ ಯೋಜನೆಯೊಂದನ್ನು ಸರಕಾರ ಮಂಜೂರು ಮಾಡಿದೆ. ಈ ಯೋಜನೆಯನ್ವಯ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ 193 ಗುಡಿಸಲುಗಳನ್ನು ನಿರ್ಮಿಸಲಾಗುವುದು ಮತ್ತು ಪ್ರತಿ ಗುಡಿಸಲಿಗೆ ರೂ. 250 ಬೆಲೆಯ ಮರಮುಟ್ಟುಗಳನ್ನು ಮಾತ್ರ ಒದಗಿಸಲಾಗುವುದು. ಜಿಲ್ಲಾಧಿಕಾರಿಯವರ ಕಚೇರಿಯಲ್ಲಿ ಜಿಲ್ಲಾಧಿಕಾರಿ ಶ್ರೀ| ಬಿ. ಎಸ್. ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಜರಗಿದ ಜಿಲ್ಲಾ ಸಮನ್ವಯ ಸಮಿತಿ ಸಭೆಯಲ್ಲಿ ಇದನ್ನು ತಿಳಿಸಲಾಯಿತು.

ದ. ಕ. ಜಿಲ್ಲೆಗೆ 9 ರೈತರ ಸೇವಾ ಸಹಕಾರಿ ಸಂಘಗಳು

ಸಹಕಾರಿ ಸಂಘಗಳ ವ್ಯಾಪಕ ಪುನರ್‌ಘಟನಾ ಕಾರ್ಯಕ್ರಮಕ್ಕನುಗುಣವಾಗಿ ದಕ್ಷಿಣ ಕನ್ನಡ ಜಿಲ್ಲೆಯು 9 ರೈತರ ಸೇವಾ ಸಹಕಾರಿ ಸಂಘಗಳನ್ನು ಪಡೆಯಲಿರುವುದು. ಇವುಗಳಲ್ಲಿ ಐದನ್ನು ದ. ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಹೆಮ್ಮಾಡಿ, ಹರೇಕಳ, ಕಂಬದಕೋಣೆ, ಪಾಣೆಮಂಗಳೂರು ಮತ್ತು ಬನ್ನೂರುಗಳಲ್ಲಿಯೂ, ಸಿಂಡಿಕೇಟ್ ಬ್ಯಾಂಕು ಹಿರಿಯಡ್ಕ ಮತ್ತು ಕೊಕ್ಕರ್ಣೆಯಲ್ಲೂ, ಕೆನರಾ ಬ್ಯಾಂಕ್ ಮತ್ತು ವಿಜಯಾ ಬ್ಯಾಂಕ್‌ಗಳು ತಲಾ ಒಂದೊಂದನ್ನು ಅನುಕ್ರಮವಾಗಿ ಎಡಪದವು ಮತ್ತು ಮೂಲ್ಕಿಯಲ್ಲೂ ಪ್ರಾರಂಭಿಸುವವು ಮತ್ತು ಈ ಮೇಲಿನ ಬ್ಯಾಂಕ್‌ಗಳು ಈ ಸಂಘಗಳಿಗೆ ಹಣವನ್ನು ಒದಗಿಸುವವು.

ವಾರ್ಸಿಟಿ ಟೇಬಲ್ ಟೆನಿಸ್ ತಂಡಕ್ಕೆ ಚಂದ್ರಶೇಖರ್

ಮೈಸೂರು ವಿಶ್ವವಿದ್ಯಾಲಯದ ಟೇಬಲ್ ಟೆನ್ನಿಸ್ ಪಂಗಡಕ್ಕೆ ಕುಂದಾಪುರ ಭಂಡಾರ್ಕಾರ್ಸ್ ಕೊಲೆಜಿನ ಶ್ರೀ| ಎನ್. ಚಂದ್ರಶೇಖರ್ ಅವರನ್ನು ನಾಯಕರನ್ನಾಗಿ ಆರಿಸಲಾಗಿದೆ.

ಗ್ರಾಮೀಣ ಜನತೆಗೆ ಶೀಘ್ರ ಸಹಕಾರಿ ಸಾಲ

ಗ್ರಾಮೀಣ ಜನತೆಯ ಕೃಷಿಯೇತರ ಅವಶ್ಯಕತೆಗಳಿಗೆ ಅಗತ್ಯವೆನಿಸುವ ಇತರ ಉದ್ದೇಶಿತ ವೆಚ್ಚದ ಬಾಬ್ತು ಸಾಲವನ್ನು ದಕ್ಷಿಣ ಕನ್ನಡದಲ್ಲಿರುವ ಸಹಕಾರಿ ಸಂಘಗಳು ಶೀಘ್ರದಲ್ಲೇ ಪೂರೈಸಲಿವೆ— ಈ ಮೂಲಕ ಗ್ರಾಮೀಣ ಋಣ ಪರಿಹಾರ ಕಾನೂನಿನಿಂದಾದ ಸಾಲದ ಪ್ರಮಾಣವನ್ನು ಸರಿಹೊಂದಿಸಿಕೊಳ್ಳಬಹುದು, ಎಂಬುದಾಗಿ ಶಾಸಕ ಶ್ರೀ| ಯು. ಟಿ. ಫರೀದ್ ಅವರು, ಹರೇಕಳದಲ್ಲಿ ನೂತನವಾಗಿ ಆರಂಭವಾದ ನೇತ್ರಾವತಿ ರೈತರ ಸೇವಾ ಸಹಕಾರಿ ಸಂಘದಿಂದ ಮಂಜೂರಾತಿಗೊಂಡ ಪ್ರಥಮ ಹಂತದ ಸಾಲವನ್ನು ವಿತರಣೆಗೊಳಿಸುವ ಸಮಾರಂಭದಲ್ಲಿ ಮಾತನಾಡುತ್ತ ಹೇಳಿದರು.

ಮಂಗಳೂರಲ್ಲಿ ಸಣ್ಣ ಕೈಗಾರಿಕಾ ಸೇವಾಸಂಸ್ಥೆಯ ಶಾಖೆ

ಸಣ್ಣ ಕೈಗಾರಿಕಾ ಸೇವಾಸಂಸ್ಥೆಯ ಶಾಖೆಯೊಂದನ್ನು ಮಂಗಳೂರಲ್ಲಿ ತೆರೆಯಲು ಭಾರತ ಸರಕಾರ ಮಂಜೂರಾತಿ ನೀಡಿದೆ. ಮುಂಗಡಪತ್ರದಲ್ಲಿ ಇದಕ್ಕೆ ಹಣ ಮೀಸಲಾಗಿರಿಸಿದ್ದು ಇಲ್ಲಿ ಈ ಶಾಖೆಗೆ ಒಂದು ಸೂಕ್ತ ಸ್ಥಳ ದೊರಕಿದೊಡನೆ ಅದನ್ನು ಪ್ರಾರಂಭಿಸಲಾಗುವುದೆಂದು ಸಂಸ್ಥೆಯ ನಿರ್ದೇಶಕ ಶ್ರೀ| ಜಿ. ಎನ್. ಮೂರ್ತಿ ವ್ಯಕ್ತಪಡಿಸಿದ್ದಾರೆ. ಮಂಗಳೂರು ಪ್ರೊಡಕ್ಟಿವಿಟಿ ಕೌನ್ಸಿಲು ಮಾರುಕಟ್ಟೆ ಆಡಳಿತದ ವಿಚಾರದಲ್ಲಿ ನಗರದಲ್ಲಿ ನಡೆಸಿದ ನಾಲ್ಕು ದಿನಗಳ ತರಬೇತಿ ಶಿಬಿರದ ಸಮಾರೋಪಸಮಾರಂಭದಲ್ಲಿ ಅಧ್ಯಕ್ಷ ಭಾಷಣಮಾಡುವಾಗ ಅವರಿದನ್ನು ತಿಳಿಸಿದರು.

ಫಿಶರೀಸ್ ಕೊಲೇಜ್‌ನವರ ವಿಕ್ರಮ

ಮೈಸೂರು ಕೃಷಿ ವಿಶ್ವವಿದ್ಯಾಲಯದ ಅಂತರ್ಕಾಲೇಜು ಟೇಬಲ್ ಟೆನಿಸ್ ಫೈನಲ್ ಮ್ಯಾಚು ಮಂಗಳೂರಲ್ಲಿ ಜರಗಿದಾಗ ಸ್ಥಳೀಯ ಫಿಶರೀಸ್ ಕೊಲೇಜ್ ತಂಡವು ಬೆಂಗಳೂರು ಕೃಷಿ ಕೊಲೇಜ್ ತಂಡವನ್ನು 5-4 ಅಂಕಗಳಿಂದ ಸೋಲಿಸಿ ಚೆಂಪಿಯನ್‌ಶಿಪ್ ಪಡೆಯಿತು.

ಮಂಗಳೂರು ಜೇಸಿ ಸಪ್ತಾಹದ ಅಂಗವಾಗಿ ಪುರಭವನದಲ್ಲಿ ಜರಗಿದ ಅಂತರ್‌ಕಾಲೇಜ್ ವಿವಿಧ ವಿನೋದಾವಳಿ ಸ್ಪರ್ಧೆಯಲ್ಲಿ, ಅತ್ಯುತ್ತಮ ಪ್ರದರ್ಶನ ನೀಡುವ ತಂಡಕ್ಕೆ ಕೊಡಲಾಗುವ ಲೋಯರ್ ಸಲ್ಡಾನಾ ಟ್ರೊಫಿಯು ಈ ಸಲ ಫಿಶರೀಸ್ ಕೊಲೇಜಿಗೆ ದೊರೆಯಿತು.

ವಿದ್ಯುತ್ ನಿಗಮಕ್ಕೆ ಶ್ರೀ| ಸುಬ್ಬಯ್ಯ ಶೆಟ್ಟಿ

ಮೈಸೂರು ವಿದ್ಯುತ್ ನಿಗಮದ ಡೈರೆಕ್ಟರ್ ಹಾಗು ಉಪಾಧ್ಯಕ್ಷರಾಗಿ ಸುದ್ದಿ ಹಾಗು ವಿದ್ಯುತ್ ಸಹಾಯಕ ಸಚಿವ ಶ್ರೀ| ಸುಬ್ಬಯ ಶೆಟ್ಟಿ ಅವರನ್ನು ನೇಮಿಸಲಾಗಿದೆ. ಈ ನೇಮಕವು ಒಡನೆಯೇ ಜಾರಿಗೆ ಬರುವುದು.

ಕಾರ್ಡು ಇಲ್ಲದೆ ಹೆಚ್ಚುವರಿ

ಒಮ್ಮೆಗೆ ಹತ್ತು ಕೆ. ಜಿ ತನಕ ಅಕ್ಕಿ ಹಾಗು ಒಂದು ಕ್ವಿಂಟಾಲ್ ತನಕ ಗೋಧಿಯನ್ನು ಕಾರ್ಡು ಇಲ್ಲದೆಯೆ ಗ್ರಾಹಕರಿಗೆ ರಾಜ್ಯದ ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ ವಿತರಣೆಮಾಡಲಾಗುವುದೆಂದು, ಕರ್ನಾಟಕದ ಆಹಾರ ಸಚಿವೆ ಶ್ರೀಮತಿ ಇ. ಇ. ವಾಜ್ ಪ್ರಕಟಿಸಿರುವರು. ಈ ಅಧಿಕ ಧಾನ್ಯವು ಮಂಗಳೂರಲ್ಲೂ ದೊರೆವುದು.

ಸಾಮೂಹಿಕ ಉಪನಯನ

ಸುರತ್ಕಲ್ ಪದ್ಮಶಾಲಿ ಸಮಾಜ ಸೇವಾ ಸಂಘದ ವತಿಯಿಂದ ಸುರತ್ಕಲ್ ಶ್ರೀ ವೀರಭದ್ರ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಕ್ಷೇತ್ರದ ಅರ್ಚಕರಾದ ಶ್ರೀ| ಕೃಷ್ಣ ಮಯ್ಯರ ನೇತೃತ್ವದಲ್ಲಿ 30 ಮಂದಿ ವಟುಗಳಿಗೆ ಸಾಮೂಹಿಕ ಉಪನಯನ ಕಾರ್ಯಕ್ರಮವು ಇತ್ತೀಚೆಗೆ ನಡೆಯಿತು.

ಭತ್ತ ಬೆಳೆಸುವ ಸ್ಪರ್ಧೆ

ಕಳೆದ ವರ್ಷದಂತೆ ಈ ವರ್ಷವೂ ಮೂಲ್ಕಿ ಲಾಯನ್ಸ್ ಕ್ಲಬ್ ವತಿಯಿಂದ ಮೂಲ್ಕಿ ರೆವಿನ್ಯೂ ಫಿರ್ಕಾ ಪಡುಬಿದ್ರೆ ಮತ್ತು ಮುಂಡ್ಕೂರು ವಲಯದ ಕೃಷಿಕರಿಗಾಗಿ ಎರಡನೇ ಬೆಳೆಗೆ ಅಧಿಕ ಇಳುವರಿ ತಳಿಯ ಭತ್ತ ಬೆಳೆಸುವ ಸ್ಪರ್ಧೆ ಏರ್ಪಡಿಸಲಾಗಿದೆ. ಅತ್ಯಧಿಕ ಭತ್ತ ಬೆಳೆಸಿದವರಿಗೆ ರೂ. 250, 150 ಮತ್ತು 100ರ ಬಹುಮಾನಗಳನ್ನು ಇಡಲಾಗಿದೆ.

ತಾಮ್ರತಂತಿ ಉತ್ಪಾದನೆ

ಹಿಂದೂಸ್ತಾನ್ ತಾಮ್ರ ಸಂಸ್ಥೆ ಕಳೆದ ಆಗಸ್ಟ್ ತಿಂಗಳಿನಲ್ಲಿ ತಾಮ್ರದ ತಂತಿ ಉತ್ಪಾದನೆಯಲ್ಲಿ ಹೋದ ವರ್ಷದ ಇದೇ ಅವಧಿಯ ಉತ್ಪಾದನೆಗಿಂತ ಶೇಕಡಾ 136ರಷ್ಟು ಹೆಚ್ಚಳ ಸಾಧಿಸಿದೆ. ಈ ಅವಧಿಯಲ್ಲಿ ಸಂಸ್ಥೆ, ಕಳೆದ ವರ್ಷದ 837 ಟನ್‌ಗಳಿಗೆದುರಾಗಿ ಸುಮಾರು 1980 ಟನ್ ತಾಮ್ರದ ತಂತಿಗಳನ್ನು ಉತ್ಪಾದಿಸಿದೆ. ಈ ವರ್ಷದ ಏಪ್ರಿಲ್-ಆಗಸ್ಟ್ ಅವಧಿಯ ಉತ್ಪಾದನೆ 7,200 ಟನ್‌ಗಳನ್ನು ಮುಟ್ಟಿದ್ದು, ಇದು ಕಳೆದ ವರ್ಷದ ಉತ್ಪಾದನೆಗಿಂತ ಶೇಕಡಾ 76ರಷ್ಟು ಹೆಚ್ಚಾಗಿದೆ.

———

ಜೀತ ಪದ್ಧತಿಯ ಬಗ್ಗೆ ಸಮೀಕ್ಷೆ

ಜೀತದಾಳುಗಳಿಗೆ ಕೇಂದ್ರ ಪರಿಶೀಲನಾ ಸಮಿತಿಯು ಸ್ವಾಯತ್ತ ಸಂಸ್ಥೆಗಳು ಮತ್ತು ಜಾಗೃತ ಆಯೋಗಗಳು ಸಮೀಕ್ಷೆಗಳ ಮೂಲಕ ಜೀತ ಪದ್ಧತಿಯನ್ನು ಗುರುತಿಸುವಾಗ ಅನುಸರಿಸಬೇಕಾದ ವಿಧಾನಗಳ ಬಗ್ಗೆ ಒತ್ತಾಯಪಡಿಸಿದೆ. ಆದಿವಾಸಿ ಸಂಶೋಧನಾ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಜೀತವನ್ನು ಗುರುತಿಸುವ ಸಮೀಕ್ಷೆಗಳನ್ನು ಕೈಗೊಂಡಿವೆ.

ಇದುವರೆವಿಗೆ ಕೇವಲ ಎಂಟು ರಾಜ್ಯಗಳು ಜೀತಪದ್ಧತಿಯನ್ನು ಗುರುತಿಸಿವೆ. ಆದರೆ, ಉಳಿದ ರಾಜ್ಯಗಳು ಈ ಬಗ್ಗೆ ಏನನ್ನೂ ತಿಳಿಸಿಲ್ಲ.

——

ಹತ್ತಿ ಜವಳಿ ರಫ್ತು ಏರಿಕೆ

ಭಾರತದಲ್ಲಿನ ಗಿರಣಿಗಳಲ್ಲಿ ತಯಾರಾದ ಹತ್ತಿ ಜವಳಿಗಳು ವರ್ಷೇ ವರ್ಷೇ ಅಧಿಕ ಪ್ರಮಾಣದಲ್ಲಿ ರಫ್ತಾಗುತ್ತಿವೆ. 1971–72ರಲ್ಲಿ 1151 ದಶಲಕ್ಷ ರೂ. ಮೌಲ್ಯದ ಜವಳಿಗಳು ವಿದೇಶಗಳಿಗೆ ರಫ್ತಾಗಿದ್ದುವು. 1975-76ರಲ್ಲಿ ಇರಿಸಿಕೊಂಡಿದ್ದ ಗುರಿ 3000 ದಶಲಕ್ಷ ರೂ.ಗಳು; ರಫ್ತು ಮಾಡಲಾದ ಗಿರಣಿ ನಿರ್ಮಿತ ಹತ್ತಿ ಜವಳಿಗಳ ಮೌಲ್ಯ 770 ದಶಲಕ್ಷ ರೂ.ಗಳು.

——

ಕಾರ್ಸ್ಟ್ ಗುಹೆಗಳಲ್ಲಿ 1,000 ಮೀಟರ್ ಆಳಕ್ಕೆ ಪ್ರವೇಶ

ಮಧ್ಯ ಏಶಿಯದ ಝುರವ್ಶಾನ್ ಗಿರಿಶ್ರೇಣಿಯ ನೆಲದಾಳದ ಗುಹೆಗಳಲ್ಲಿ 1,000 ಮೀಟರು ಆಳಕ್ಕೆ ತಲಪುವ ಮೂಲಕ ಕೀಯೆವ್ ಮತ್ತು ತೊವರ್ಸ್ಕ್ ಪಟ್ಟಣದ ಗುಹಾ ಶಾಸ್ತ್ರಜ್ಞರು ಒಂದು ದಾಖಲೆ ಸ್ಥಾಪಿಸಿದ್ದಾರೆ. ಸೋವಿಯತ್ ಒಕ್ಕೂಟದ ಕಾರ್ಸ್ಟ್ ಗುಹೆಗಳಲ್ಲಿ ಮನುಷ್ಯನು ಈ ಹಿಂದೆಂದೂ ತಲುಪದ ಅತ್ಯಂತ ಆಳದ ಸ್ಥಳವಾಗಿದೆ ಇದು. ಸೋವಿಯೆತ್ ಗುಹಾಶಾಸ್ತ್ರಜ್ಞರು ನಾಲ್ಕು ವರ್ಷಗಳ ಹಿಂದೆ ಈ ಪ್ರಪಾತವನ್ನು ಪತ್ತೆ ಮಾಡಿದರು. ಇದಕ್ಕೀಗ "ಕಿಲ್ಸಿ" ಎಂದು ಹೆಸರಿಡಲಾಗಿದೆ. ಮೊದಲ ಶೋಧನೆಯಲ್ಲಿ ಹೆಚ್ಚು ಕಡಮೆ ಇದು ಲಂಬ ಗುಹಾ-ಕುಳಿಯೆಂಬುದನ್ನು ಕಂಡುಹಿಡಿಯಲಾಯಿತು. ಅಪೂರ್ವ ಸೌಂದರ್ಯದ ಗವಿಕೋಣೆಗಳು, ಮೊಗಸಾಲೆಗಳು ಹಾಗೂ ಬಾವಿಗಳು ಇದರಲ್ಲಿರುವುದು ಕಂಡುಬಂತು. ಎರಡನೆ ತಂಡದವರು 720 ಮೀಟರು ಆಳವನ್ನು ತಲಪಿದ್ದರು.

——

ಮಂಗಳೂರು ಲಾಯನ್ಸ್ ಕ್ಲಬ್

ಇದರ ಆಶ್ರಯದಲ್ಲಿ ತಾ. 17ರಂದು ಸಂಜೆ ಕದ್ರಿ ಮಲ್ಲಿಕಟ್ಟೆಯಲ್ಲಿರುವ ಲಾಯನ್ಸ್ ಸೇವಾಮಂದಿರದಲ್ಲಿ ಮಕ್ಕಳ ಚಿಕಿತ್ಸಾ ತಜ್ಞ ಲಾಯನ್ ಡಾ| ಪಿ. ಎನ್. ಕೃಷ್ಣಮೂರ್ತಿಯವರು 'ಮಕ್ಕಳ ಆರೈಕೆ' ಎಂಬ ವಿಷಯದ ಕುರಿತು ಭಾಷಣ ಮಾಡಿದರು.

——

ವಿಚಿತ್ರ ಆದರೂ ಸತ್ಯ

ಮೋಟಾರ್ ಓಡುವಾಗ ಗಟಾರ್ ಭೀತಿ ನೀಗಲು ಸ್ತೋತ್ರ

ಫೆಡರಲ್ ಜರ್ಮನ್ ಗಣರಾಜ್ಯದಲ್ಲಿರುವ ವಾರೆಂಡಾರ್ಫ್ ಚರ್ಚಿನವರ ವಾರ್ತಾಪತ್ರವಾದ "ಕೊಂಟಾಕ್ಟೆ"ಯು ಹೊಸತಾಗಿ ಪ್ರಕಟಗೊಂಡಿರುವ ಒಂದು ಸ್ತೋತ್ರಗೀತ ಪುಸ್ತಕದ ಜಾಹೀರಾತು ಮಾಡುತ್ತಿದೆ. "ನಿಮ್ಮ ರಜಾಕಾಲದ ಪ್ರವಾಸದಲ್ಲಿ ಈ ಪುಸ್ತಕವನ್ನು ಎಷ್ಟು ಚೆನ್ನಾಗಿ ಬಳಸಿಕೊಳ್ಳಬಹುದೆಂಬುದನ್ನು ನೀವು ಎಂದಾದರೂ ಆಲೋಚಿಸಿದ್ದೀರಾ?" ಎಂದು ಅದು ಕೇಳುತ್ತದೆ. "ಪುಸ್ತಕವನ್ನು ನಿಮ್ಮ ಬಳಿಯಲ್ಲಿಟ್ಟುಕೊಂಡು, ಡ್ರೈವರನು ತೂಕಡಿಸದಂತೆ ಸ್ತೋತ್ರಗೀತವನ್ನು ಪಠಿಸಬಹುದು" ಎಂದದು ಹೇಳುತ್ತದೆ. ಇಷ್ಟು ಸಾಲದೆ, ಈ ರೀತಿ ಶಿಫಾರಸು ಮಾಡುತ್ತದೆ: "ಗಂಟೆಗೆ 60 ಕಿಲೋ ಮೀಟರು ವೇಗದಲ್ಲಿ ಚಲಿಸುತ್ತಿರುವಾಗ ಸ್ತೋತ್ರ 303–"ದೇವರ ಹೆಸರಲ್ಲಿ ನಾವು ಪಯಣಿಸುತ್ತಿದ್ದೇವೆ" ಎಂಬುದನ್ನು, ಗಂಟೆಗೆ 100 ಕಿಲೋಮೀಟರು ವೇಗದಲ್ಲಿ ಚಲಿಸುತ್ತಿರುವಾಗ ಸ್ತೋತ್ರ 656–"ಭೂಮಿಯ ಮೇಲೆ ನಾವು ಕೇವಲ ಅತಿಥಿಗಳು" ಎಂಬುದನ್ನು, ಗಂಟೆಗೆ 150 ಕಿಲೋಮೀಟರಿನಲ್ಲಿ ಚಲಿಸುತ್ತಿರುವಾಗ ಸ್ತೋತ್ರ 659–"ಓ ಜಗತ್ತೆ ನಾನು ನಿನ್ನಿಂದ ಅಗಲಿ ಹೋಗಲೇಬೇಕಲ್ಲ!!!" ಎಂಬುದನ್ನು ಪಠಿಸಬೇಕು.

ಹಣ ಸಾಲದೆ ಜಿನೋವಾ ನಗರ ದೀನನಗರವಾಗುತ್ತಿದೆ

ಇಟಲಿಯ ಭಾರೀ ಪಟ್ಟಣಗಳಲ್ಲಿ ಒಂದಾದ ಜಿನೋವ ಇಂದು ದಿವಾಳಿಯ ಸ್ಥಿತಿಯಲ್ಲಿದೆ. ನಗರದ ಉಪಮೇಯರ್ ಫ್ರಾಂಕೊ ಮೊಂಟೆವರ್ಡೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತ ನಗರಸಭೆಯ ನೌಕರರಿಗೆ ಸಂಬಳಕೊಡಲು ಸಾಧ್ಯವಾಗದು ಎಂದು ತಿಳಿಸಿದ್ದಾರೆ. 1973ರಿಂದ ಜಿನೋವ ನಗರವು ಇಟಲಿಯ ಸರ್ಕಾರದಿಂದ 95,000 ಮಿಲಿಯ ಲಿರಾಗಳನ್ನು ಪಡೆಯಬೇಕಾಗಿತ್ತು, ಆದರೆ ಅದು ಬರಲಿಲ್ಲ. ಈ ಮಧ್ಯೆ ನಗರ ಸಭೆಯ ಖರ್ಚುಗಳು ಮತ್ತು ಸಾಲಗಳು ಬೆಳೆಯುತ್ತಲೆ ಇವೆ.

'ತಲೆ ಕಡಿವ' ಸ್ಪರ್ಧೆ

ಇಟಲಿಯ ನಾಪಿತ ಪಿನೊ ಅಮೊಟೊ 83 ಗಂಟೆ ಸತತ 200 ಜನರ ಕ್ರಾಪ್ ಕಟ್ಟಿಂಗ್ ದಾಖಲೆ ಸ್ಥಾಪಿಸಿದ್ದನು. ಅದನ್ನೀಗ ಗ್ರೀಕ್ ನಾಪಿತ ಕ್ರಿಸ್ತೊ ಅಂಜೆಲೊ ಪಾಲಾಸ್ ಮುರಿದಿದ್ದಾರೆ. 86 ಗಂಟೆಗಳಲ್ಲಿ 247 ಕ್ರಾಪ್ ಕಟ್ಟಿಂಗ್! ಹೊಸ ವಿಕ್ರಮ ಸ್ಥಾಪಿಸಿದ ಮರುಘಳಿಗೆಯಲ್ಲೇ ಆತ ಮೂರ್ಛೆ ಹೋಗಿ ಆಸ್ಪತ್ರೆ ಸೇರಿದ.

ಮಿಲಿಯಾಂತರ ಕುಡುಕರಲ್ಲಿ ಒಂದು ಲಕ್ಷ ಭಾರೀ ಕುಡುಕರು

ಫೆಡರಲ್ ಜರ್ಮನ್ ಗಣರಾಜ್ಯದಲ್ಲಿ (ಎಫ್. ಆರ್. ಜಿ.) ಯುವಜನರ ಮಧ್ಯೆ "ಕುಡಿತವು ಸಾಂಕ್ರಾಮಿಕ ಜಾಡ್ಯದಂತೆ ಬೆಳೆಯುತ್ತಿದೆ"ಯೆಂದು "ಸ್ಪೀಗಲ್" ಪತ್ರಿಕೆ ಅತ್ಯಂತ ಕಳವಳದಿಂದ ಬರೆದಿದೆ. ದೇಶದಲ್ಲಿ ಏನಿಲ್ಲೆಂದರೂ ಕನಿಷ್ಠ 100,000 ಭಾರೀ ಕುಡುಕ ತರುಣರು ಹಾಗೂ ತರುಣಿಯರು ಇದ್ದಾರೆಂದೂ ತಿಳಿಸಿರುವ ಪತ್ರಿಕೆ, ಈ ಸಂಬಂಧದಲ್ಲಿ ತಜ್ಞರೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿದೆ: "ದೇಶದಲ್ಲಿ ಕುಡುಕರ ಪೀಳಿಗೆ ಬೆಳೆಯುತ್ತಿದೆ, ರಾಷ್ಟ್ರಕ್ಕೆ ಇದೊಂದು ಭಾರೀ ತಲೆನೋವು ಆಗುವುದರಲ್ಲಿ ಸಂದೇಹವಿಲ್ಲ."

"ಚಿಕ್ಕ ಪ್ರಾಯದ ಬಾಲೆ। ಚದುರೆ ॥"

ಅಮೆರಿಕದ ರಾಷ್ಟ್ರಪತಿ ಸ್ಥಾನದ ಉಮೇದುವಾರಿ ಡೆಮಾಕ್ರಾಟಿಕ್ ಪಕ್ಷದ ಜಿಮ್ಮಿ ಕಾರ್ಟರ್‌ರ ಎಂಟು ವರ್ಷದ ಮಗಳು ಅಮಿ ಇಷ್ಟೊಂದು ಚಿಕ್ಕ ವಯಸ್ಸಿನಲ್ಲಿಯೆ ತುಂಬ ಜಾಣ್ಮೆಯನ್ನು ಪ್ರದರ್ಶಿಸುತ್ತಿದ್ದಾಳೆ, ಉದ್ಯೋಗವನ್ನು ವಿಸ್ತರಿಸಿದ್ದಾಳೆ. "ಇಂಟರ್‌ನ್ಯಾಷನಲ್ ಹೆರಾಲ್ಡ್ ಟ್ರಿಬ್ಯೂನ್" ಈ ಬಗ್ಗೆ ವರದಿಮಾಡುತ್ತ, ತನ್ನ ತಂದೆಯ ಜೊತೆ ಸಂಚರಿಸುವ ಪತ್ರಕರ್ತರಿಗೆ ಆಕೆ 10 ಸೆಂಟುಗಳಿಗೆ ಒಂದು ಲೋಟ ಲೆಮೊನೇಡ್ ಮತ್ತು 50 ಸೆಂಟುಗಳಿಗೆ ಸ್ಯಾಂಡ್‌ವಿಚ್ ಮಾರುತ್ತಾಳೆಂದು ತಿಳಿಸಿದೆ.

"50 ಸೆಂಟುಗಳೆಂದರೆ ತುಂಬ ದುಬಾರಿಯಾಯಿತು" ಎಂದು ಹೇಳಿ ತಂದೆ ಬೆಲೆ ಇಳಿಸಬೇಕೆಂದು ಮಗಳ ಮನಸ್ಸನ್ನು ಒಲಿಸಲು ಪ್ರಯತ್ನಿಸುತ್ತಾರೆಂದೂ ಪತ್ರಿಕೆ ತಿಳಿಸಿದೆ.

ಸೌಂದರ್ಯ ಸ್ಪರ್ಧೆ ಅರ್ಹತೆಗೆ 20,000 ಇಲಿ ಬಾಲಗಳು

ಫಿಲಿಪ್ಪೀನ್ಸ್‌ನ ಉತ್ತರ ಭಾಗದಲ್ಲಿರುವ ಕ್ಯಾಂಡೆಲೇರಿಯ ನಗರದ ಸೌಂದರ್ಯ ಸ್ಪರ್ಧೆ ಯೋಜಕರು ಅದರಿಂದ ಒಂದಿಷ್ಟು ಪ್ರತ್ಯಕ್ಷ ಪ್ರಯೋಜನೆಯನ್ನು ಪಡೆಯಬೇಕೆಂದು ಆಲೋಚಿಸಿದರು. ಆದಕ್ಕಾಗಿ ಅವರು ಅಂತಿಮ ಸೌಂದರ್ಯ ಸ್ಪರ್ಧೆಯಲ್ಲಿ ಅರ್ಹತೆ ಪಡೆಯುವುದಕ್ಕಾಗಿ ಪ್ರತಿಯೊಬ್ಬರೂ 20,000 ಇಲಿ ಬಾಲಗಳನ್ನು ಹಾಜರುಪಡಿಸಬೇಕೆಂದು ಸೂಚಿಸಿದರು. ಮತ್ತೆ ಅದೇ ಕಾಲಕ್ಕೆ ಪಟ್ಟಣವು ಇಲಿಗಳ ಕಾಟದಿಂದಲೂ ಮುಕ್ತವಾಗುತ್ತದೆ!

ಟರ್ಕ್‌ಮೆನ್ ಜಮಖಾನೆಗಳು

ಇವುಗಳ ತಯಾರಿಕೆ ಜಡಹೃದಯಿಗಳ ಕೆಲಸವಲ್ಲ

ಸೋವಿಯೆತ್ ಒಕ್ಕೂಟವು ಕೈಮಗ್ಗದ ಜಮಖಾನೆಗಳ ಪಾರಂಪರಿಕ ನಿರ್ಯಾತಗಾರ ದೇಶವಾಗಿದೆ. ಅದರಲ್ಲೂ ವಿಶೇಷವಾಗಿ ಟರ್ಕ್‌ಮೆನ್ ಜಮಖಾನೆಗಳಿಗೆ ಜಾಗತಿಕ ಪೇಟೆಯಲ್ಲಿ ಬಹುದೊಡ್ಡ ಬೇಡಿಕೆ ಇದೆ. ಎಲ್ಲಾ ಖಂಡಗಳಿಂದಲೂ ಈ ಜಮಖಾನೆಗಳಿಗೆ ಬೇಡಿಕೆಗಳು ಬರುತ್ತಲಿರುತ್ತವೆ.

ಟರ್ಕ್‌ಮೆನ್ ಜಮಖಾನೆಗಳನ್ನು ನೋಡಿದಾಗ, ಅವುಗಳನ್ನು ನೋಡುತ್ತಿರುವವರಿಗೆ ಅವುಗಳನ್ನು ತಯಾರಿಸಿದ ಹುಡುಗಿಯರ ಹೃದಯದ ಮಿಡಿತ, ಅವುಗಳನ್ನು ತಯಾರಿಸುತ್ತಿದ್ದಾಗ ಅವರು ಹಾಡುತ್ತಿದ್ದ ಹಾಡುಗಳೂ ಕೇಳಿಸಿದಂತಾಗುತ್ತದೆ. ಜಡ ಹೃದಯದ ವ್ಯಕ್ತಿ, ಸ್ಫೂರ್ತಿ ಮತ್ತು ಅದ್ಭುತಕಲ್ಪನೆಗಳ ಅಭಾವ ಇರುವ ಯಾರೂ ಸುಂದರವಾದ ಜಮಖಾನವನ್ನು ನೆಯ್ಯಲಾರರೆಂದು ತಾಷಾಜ್‌ನಲ್ಲಿರುವ ಜಮಖಾನ ಕಾರ್ಖಾನೆಯ ನಿರ್ದೇಶಕಿ ಸುಲ್ಗಾನ್ ಯೆರ್ಮ್ಯೊದೋವಾ ಹೇಳುತ್ತಾರೆ. ಸ್ವತಃ ಸುಲ್ಗಾನ್ ಅಪ್ರೆಂಟೈಸ್‌ನಿಂದ ಕಾರ್ಖಾನೆಯ ನಿರ್ದೇಶಕಿ ವರೆಗೆ ಸುದೀರ್ಘ ದಾರಿಯನ್ನು ಕ್ರಮಿಸಿಬಂದಾಕೆ.

ಟರ್ಕ್‌ಮೆನ್ ನೇಕಾರರ ಜಮಖಾನೆ ನೆಯ್ಗೆ ಕಲೆ ಮತ್ತವರ ಅನ್ಯಾದೃಶ್ಯ ಪರಂಪರೆಗಳು ಶತಮಾನಗಳಷ್ಟು ಹಳೆಯವು. ಮೊದಲ ನೋಟಕ್ಕೆ ಜಮಖಾನ ನೆಯ್ಗೆ ತುಂಬ ಸುಲಭದ ಕಾರ್ಯವಾಗಿ ಕಾಣಿಸುತ್ತದೆ. ಮಗ್ಗದ ಮೇಲೆ ಉಕ್ಕಿನ ಹುರಿಗಳನ್ನು ಹರಡಲಾಗುತ್ತದೆ. ಹುಡುಗಿಯರು ತಮ್ಮ ಚಾಲೋಕು ಚಾಕಚಕ್ಯತೆಯ ಬೆರಳುಗಳಿಂದ ಬಣ್ಣದ ಉಣ್ಣೆಯ ದಾರಗಳ ಗಂಟುಗಳನ್ನು ಹಾಕುತ್ತಾರೆ. ಅನಂತರ ದಾರದ ತುದಿಗಳನ್ನು ಕತ್ತರಿಸುತ್ತಾರೆ. ಮೊದಲ ಸಹಸ್ರ ಸಹಸ್ರಾರು ಬಣ್ಣದ ಗಂಟುಗಳು ಒಂದು ಸುಂದರವಾದ ಚಿತ್ರವನ್ನು ರಚಿಸುತ್ತವೆ. ಜಮಖಾನವು ಸಿದ್ಧಗೊಂಡಾಗ ಅದರಲ್ಲಿಯ ಒಂದೇ ಒಂದು ಗಂಟನ್ನು ಕೂಡ ಯಾರಿಗೂ ಕಂಡುಹಿಡಿಯಲು ಸಾಧ್ಯವಾಗುವುದಿಲ್ಲ. ಅದರ ಹೊರಮೈ ಎಷ್ಟೊಂದು ನಯವಾಗಿರುತ್ತದೆಯೆಂದರೆ ಸುಂದರವಾದ ರತ್ನಗಳನ್ನು ಕೂರಿಸಿ ರಚಿಸಿದ ಮೊಸಾಯಿಕ್ ಚಿತ್ರದಂತೆ ಅದು ಕಾಣಿಸುತ್ತದೆ. ಆದರೆ ವಾಸ್ತವದಲ್ಲಿ ಪ್ರತಿ ಚದುರುಮೀಟರಿನಲ್ಲೂ 11,48,000ಗಳಷ್ಟು ಗಂಟುಗಳಿರುತ್ತವೆ!

ಅಷ್ಖಾಬಾದಿನಲ್ಲಿರುವ ಖಾಯಂ ಪ್ರದರ್ಶನವೊಂದರಲ್ಲಿ ಅತ್ಯಮೋಘವಾದ ಕೆಲವು ಟರ್ಕ್‌ಮೆನ್ ಜಮಖಾನ ನಮೂನೆಗಳನ್ನು ಇರಿಸಲಾಗಿದೆ. ಒಂದಂತೂ ಅದ್ಭುತ ಅಚ್ಚರಿಯದು, ಅದಕ್ಕೆ "ಸೋವಿಯೆತ್ ಒಕ್ಕೂಟದ ಜನತೆಗಳ ಮೈತ್ರಿ" ಯೆಂದು ಕರೆಯಲಾಗುತ್ತದೆ. ಹದಿನೈದು ಜನ ಹುಡುಗಿಯರು (ಸೋವಿಯೆತ್ ಒಕ್ಕೂಟದಲ್ಲಿ 15 ಗಣರಾಜ್ಯಗಳು ಇವೆ) ಇದನ್ನು ವಿವಿಧ ಛಾಯೆಗಳ ನೂರು ಬಣ್ಣಗಳ ನೂಲುಗಳನ್ನು ಉಪಯೋಗಿಸಿ ತಯಾರಿಸಿದ್ದಾರೆ. ಪ್ಯಾರಿಸ್ (1937) ಮತ್ತು ಬ್ರುಸೆಲ್ಸ್ (1958) ಗಳಲ್ಲಿ ನಡೆದ ಜಾಗತಿಕ ಮೇಳಗಳಲ್ಲಿ ಪದಕ–ಪ್ರಶಸ್ತಿಗಳನ್ನು ಪಡೆದ ಜಮಖಾನೆಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಅವುಗಳೊಂದಿಗೆ ಇನ್ನು ಹಲವು ಹತ್ತು ಸೊಗಸು, ಸೌಂದರ್ಯಗಳ ಅಮೋಘ ಜಮಖಾನೆಗಳೂ ಇವೆ.

ಮಾಸ್ಕೋ–ಕಲಕತ್ತಾ ನಡುವೆ ವಿಮಾನಯಾನ ಆರಂಭ

ಈ ವರ್ಷ ನವೆಂಬರ್ ತಿಂಗಳಿನಲ್ಲಿ ಮಾಸ್ಕೋ ಮತ್ತು ಕಲಕತ್ತಾಗಳ ನಡುವೆ ವಾರಕ್ಕೊಂದರಂತೆ ವಿಮಾನಯಾನವನ್ನು ಆರಂಭಿಸುವುದರೊಂದಿಗೆ "ಏರ್ ಇಂಡಿಯ" ಹಾಗೂ ಸೋವಿಯೆತ್ "ಏರ್‌ಲೈನ್ಸ್ ಏರೋಫ್ಲೋತ್"ಗಳ ನಡುವಣ ಸಹಕಾರವು ಇನ್ನಷ್ಟು ವ್ಯಾಪಕಗೊಳ್ಳುವುದು. ಈ ವಿಮಾನವು ಮುಂಬೈಯಲ್ಲೂ ಇಳಿದು ಪ್ರಯಾಣ ಮುಂದುವರಿಸುವುದು. ಕಲಕತ್ತಾದ ಆಚೆಗೆ ಈ ವಿಮಾನಯಾನವು ದಕ್ಷಿಣ ಏಶಿಯದ ಕೆಲವು ಸ್ಥಳಗಳಿಗೂ ವಿಸ್ತರಿಸುವುದು.

ವೃಕ್ಷಗಳಿಂದ ಶಕ್ತಿ

— ವ್ಯಾಗ್ಗಿ ಮೆಕೆಲ್ಲಾಂಡ್

ಪೆಟ್ರೋಲಿಯಂ ಕೈಗಾರಿಕೆಗಳ ಒಡೆಯರು ತೈಲದ ಹೊಸ ಮೂಲಗಳನು ಅನ್ವೇಷಿಸಲು ಕೋಟಿಗಟ್ಟಲೆ ಡಾಲರುಗಳನ್ನು ವ್ಯಯಿಸುತ್ತಿದ್ದಾರೆ. ಆದರೆ ನಮ್ಮ ಹಿತ್ತಿಲುಗಳಲ್ಲೇ ಸ್ವಲ್ಪಮಟ್ಟಿಗೆ ನಮ್ಮ ಶಕ್ತಿ ಸಮಸ್ಯೆಗೆ ಪರಿಹಾರ ದೊರೆಯಬಹುದು.

ಮಾನವನಿಗೆ ಪ್ರಾಚೀನ ಕಾಲದಿಂದ ಪರಿಚಿತವಿರುವ ಶಕ್ತಿ ಮೂಲ–ವೃಕ್ಷಗಳು. ಜಾರ್ಜಿಯ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಈಗ ಮರಗಳ ಶಕ್ಯತೆಯ ಬಗ್ಗೆ ಪುನರ್ವಿಮರ್ಶೆ ಮಾಡುತ್ತಿದ್ದಾರೆ. ಪ್ರಾಗೈತಿಹಾಸಿಕ ಕಾಲದಿಂದಲೂ ಶಾಖ ಮತ್ತು ಬೆಳಕಿಗಾಗಿ ಮಾನವನು ಮರಗಳನ್ನು ಸುಡುತ್ತಿದ್ದಾನಾದರೂ, ಮರಗಳು ಈಗಲೂ ಸಮೃದ್ಧವಾಗಿವೆ, ತೈಲವಾದರೋ ದುರ್ಲಭವಾಗುತ್ತಿದೆ.

ಶಕ್ತಿಮೂಲವಾಗಿ ಮರಗಳ ಉಪಯೋಗಕ್ಕೆ ಮೂರು ಸಾಧ್ಯತೆಗಳನ್ನು ಅಭ್ಯಸಿಸಲಾಗುವುದು: ಶಕ್ತಿ ಕಾರ್ಖಾನೆಗಳಲ್ಲಿ ಇಂಧನಕ್ಕಾಗಿ ಕಲ್ಲಿದ್ದಲಿನ ಬದಲು ಮರಗಳನ್ನು ಸುಡುವುದು, ಪೈನ್ ಮರಗಳಲ್ಲಿ ಓಲಿಯೋರೆಸಿನ್ ನಿರ್ಮಾಣದ ಜೀವವೈಜ್ಞಾನಿಕ ಪ್ರಕ್ರಿಯೆ ಮತ್ತು ಸೆಲ್ಲುಲೋಸ್ ಮೆಥೇನ್ ಆಗಿ ಪರಿವರ್ತನೆಗೊಳ್ಳುವ ಜೀವವೈಜ್ಞಾನಿಕ ಪ್ರಕ್ರಿಯೆ.

"ಶಕ್ತಿ ತೋಟಗಾರಿಕೆ" ಒಂದು ಆಶಾದಾಯಕ ಕಲ್ಪನೆ. ಶಕ್ತಿ ತೋಟಗಾರಿಕೆಯೆಂದರೆ ಮರಗಳ ಭಾರೀ ವಿಸ್ತಾರವಾದ ತೋಟ, ಇಲ್ಲಿ ಬಹು ಕಡಿಮೆ ಅಂತರಗಳಲ್ಲಿ ಮರಗಳನ್ನು ನೆಡಲಾಗುವುದು, ಇವನ್ನು ಪ್ರತಿ ಐದು ಅಥವಾ ಹತ್ತು ವರ್ಷಗಳಿಗೊಮ್ಮೆ ಕಡಿಯಲಾಗುವುದು. ಮರಗಳನ್ನು ಕಡಿದಾಗ, ಕಾಂಡದ ಉಳಿಕೆಗಳಿಂದ ಹೊಸ ಬೆಳವಣಿಗೆ ಆರಂಭವಾಗುವುದು. ಹೀಗೆ ಆವರ್ತನವು ಮುಂದುವರಿಯುವುದು.

ಸಾಧ್ಯವಾದಷ್ಟು ಅಧಿಕ ಇಳುವರಿ ಪಡೆಯುವಂತೆ ಈ ಮರಗಳ ಆಯ್ಕೆ ಮಾಡಬೇಕು. ಕಾಂಡ, ಶಾಖೆಗಳು ಮತ್ತು ಎಲೆಗಳು ಮುಂತಾದ ನೆಲದ ಮೇಲಿನ ಸಸ್ಯ ಭಾಗಗಳ ಉತ್ಪಾದನೆಯನ್ನು ಹೆಚ್ಚಿಸಬೇಕಾದರೆ ಸೌರ ವಿಕಿರಣವನ್ನು ಪರಿವರ್ತಿಸಿ ಹೆಚ್ಚು ದಕ್ಷತೆಯಿಂದ ಬೆಳೆಯಬಲ್ಲ ಉತ್ತಮ ಜಾತಿಯ ಮರಗಳನ್ನು ಆಯ್ಕೆಮಾಡಬೇಕಾಗುವುದು.

ಶಕ್ತಿ ತೋಟಗಾರಿಕೆಗೆ ಯೋಗ್ಯವಾಗಬಹುದಾದಂಥ ಮೂರು ವೃಕ್ಷ ಜಾತಿಗಳನ್ನು ಪರಿಶೀಲಿಸಲಾಗುತ್ತಿದೆ, ಇವು ಅಮೆರಿಕನ್ ಸೈಕಮೋರ್, ಸ್ವೀಟ್ ಗಮ್ ಮತ್ತು ಯೆಲ್ಲೋ ಪಾಪ್ಲರ್. ಉದಾಹರಣೆಗೆ ವಾಯವ್ಯ ಪ್ಯಾಸಿಫಿಕ್‌ನಲ್ಲಿ ರೆಡ್ ಆಲ್ಡರ್ ಮರವು ಎಕರೆಗೆ 16.3 ಟನ್‌ಗಳಷ್ಟು ಇಳುವರಿಯನ್ನು ನೀಡಿತು, ಜಾರ್ಜಿಯದಲ್ಲಿ ಸೈಕಮೋರ್ ವೃಕ್ಷಗಳ ಉತ್ಪಾದನೆ ಎಕರೆಗೆ ಸರಾಸರಿ 11ರಿಂದ 16 ಟನ್‌ಗಳಷ್ಟು.

"ಅರಣ್ಯ ಸಸ್ಯೋತ್ಪನ್ನವು ಪರಿಶೀಲನ ಯೋಗ್ಯವಾಗಿರುವ ಕ್ಷೇತ್ರ, ದಕ್ಷಿಣದ ಪೈನ್‌ಗಳು, ಹೊಸ ಅಡ್ಡತಳಿಯ ಪಾಪ್ಲರ್‌ಗಳು ಮತ್ತು ಇತರ ಜಾತಿಯ ವೃಕ್ಷಗಳಲ್ಲಿ ಅಧಿಕ ಉತ್ಪಾದನೆ ಕಂಡುಬರುವ ಸಾಧ್ಯತೆಯಿದೆ" ಎಂದು ಅಮೆರಿಕದ ಶಕ್ತಿ ಸಂಶೋಧಕರೊಬ್ಬರು ಹೇಳುತ್ತಾರೆ.

ಕ್ಷೇತ್ರಗಳಲ್ಲಿ ಸಾಗಿಸಲು ಸುಲಭವಾಗುವಂತೆ, ಮರಗಳನ್ನು ಚಿಕ್ಕ ತುಂಡುಗಳಾಗಿ ಕತ್ತರಿಸಲಾಗುವುದು. ಅನಂತರ ಈ ತುಂಡುಗಳನ್ನು ನುಣ್ಣಗಿನ ಪುಡಿಯಾಗಿ ಮಾಡಿ, ಶಕ್ತಿ ಕಾರ್ಖಾನೆಗಳಲ್ಲಿರುವ ದಹನ ಯಂತ್ರಗಳಿಗೆ ಒದಗಿಸಲಾಗುವುದು (ಇದು ಕಲ್ಲಿದ್ದಲಿನ ದಹನ ಪ್ರಕ್ರಿಯೆಯಂತಿದೆ). ಮರವು ಉತ್ಪಾದಿಸುವ ಶಾಖ ಪ್ರಮಾಣವನ್ನು ಕಲ್ಲಿದ್ದಲಿಗೆ ಹೋಲಿಸಿದರೆ ಕಲ್ಲಿದ್ದಲಿಗಿಂತ ಇಮ್ಮಡಿ ಪ್ರಮಾಣದಷ್ಟು ಮರ ಬೇಕಾಗುವುದು. ಆದುದರಿಂದ ಆರ್ಥಿಕವಾಗಿ ಕಲ್ಲಿದ್ದಲಿಗಿಂತ ಹೆಚ್ಚು ಲಾಭಕರವಾಗಬೇಕಾದರೆ, ಹೆಚ್ಚು ಮರಗಳ ಉತ್ಪಾದನೆಯಾಗಬೇಕು.

ಶಕ್ತಿ ತೋಟಗಾರಿಕೆ ಯಶಸ್ವಿಯಾಗಬೇಕಾದರೆ ವಿದ್ಯುತ್ತನ್ನು ಉತ್ಪಾದಿಸುವ ಶಕ್ತಿ ಕಾರ್ಖಾನೆಗಳ ಬೇಡಿಕೆಯನ್ನು ಪೂರೈಸಲು ಸಾಕಾಗುವಷ್ಟು ಮರಗಳನ್ನು ಉತ್ಪಾದಿಸಬೇಕು.

132 ಚದರ ಕಿಲೋಮೀಟರ್‌ಗಳ ಶಕ್ತಿ ತೋಟವು, 50,000 ಜನಸಂಖ್ಯೆಯ ನಗರವೊಂದರ ಅಗತ್ಯಗಳನ್ನು ಪೂರೈಸಲು ಸಾಕಾಗುವಷ್ಟು ದೊಡ್ಡದಾಗಿರುವ 150 ಮೆಗಾವಾಟ್ ಕಾರ್ಖಾನೆಗೆ ಬೇಕಾದಷ್ಟು ಶಕ್ತಿಯೊದಗಿಸಬಲ್ಲುದು ಎಂದು ಅಂದಾಜುಮಾಡಲಾಗಿದೆ.

ಅಮೆರಿಕದ ಜಮೀನಿನಲ್ಲಿ ಶೇಕಡ ಮೂರಕ್ಕಿಂತ ಕಡಿಮೆ ಅಂಶವು, 1985ರಲ್ಲಿ ಅಮೆರಿಕಕ್ಕೆ ಅಗತ್ಯವೆಂದು ನಿರೀಕ್ಷಿಸಲಾಗಿರುವಷ್ಟು ಶಕ್ತಿ ಅಗತ್ಯಗಳಿಗೆ ಸಮಾನಾದ ಸಂಚಿತ ಶಕ್ತಿಯನ್ನು ಉತ್ಪಾದಿಸಬಲ್ಲುದು ಎಂದು 1972ರಲ್ಲಿ ಅಮೆರಿಕದ ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನ ಮತ್ತು ಅಮೆರಿಕದ ರಾಷ್ಟ್ರೀಯ ವಾಯುಯಾನ ಮತ್ತು ಗಗನಾಡಳಿತ ಮಂಡಳಿಯ ಸೌರ ಶಕ್ತಿ ಸಮಿತಿಯವರು ಹೇಳಿದರು. ಪರಿವರ್ತಿಸಲಾಗುವ ಸೌರಶಕ್ತಿಯಲ್ಲಿ ಶೇಕಡ ಮೂರಕ್ಕಿಂತ ಹೆಚ್ಚಿನಂಶವನ್ನು ಉಪಯೋಗಿಸಿ ಸಂಕೃತ ಬೆಳೆಗಳನ್ನು ಉತ್ಪಾದಿಸಲು ಮುಂದುವರಿದ ವ್ಯವಸ್ಥಾಪನ ವಿಧಾನಗಳನ್ನು ಬಳಸಿದರೆ ಇದು ಸಾಧ್ಯ.

ಇಂಧನಕ್ಕಾಗಿ ಮರಗಳ ಉತ್ಪಾದನೆಯಿಂದ ಇತರ ಪ್ರಯೋಜನಗಳೂ ಇವೆ. ಮರಗಳು ವಾಯುಮಂಡಳದಲ್ಲಿ ಆಮ್ಲಜನಕ–ಇಂಗಾಲಾಮ್ಲದ ಸಮತೋಲನವನ್ನು ಉತ್ತಮಗೊಳಿಸುತ್ತವೆ. ಮರಗಳು ಮಣ್ಣಿನ ಸವೆತವನ್ನು ಕಡಿಮೆಮಾಡುತ್ತವೆ. ಅವು ನದಿಗಳ ಹಾಗೂ ತೊರೆಗಳ ಸ್ವಚ್ಛತೆಯನ್ನು ಹೆಚ್ಚಿಸುತ್ತವೆ. ಮರಗಳನ್ನು ಕಟಾವು ಮಾಡುವಾಗ ಮಣ್ಣಿನಲ್ಲಿರುವ ಪೋಷಕ ಸತ್ವಗಳು ನಷ್ಟವಾಗುವುದಿಲ್ಲ. ಶಕ್ತಿ ಕಾರ್ಖಾನೆಗಳಲ್ಲಿ ಮರಗಳ ದಹನದ ನಂತರ ಉಳಿಯುವ ಬೂದಿಯು ಗೊಬ್ಬರಕ್ಕೆ ಬಹಳ ಉಪಯುಕ್ತ.

ಮರಗಳನ್ನು ಇಂಧನಕ್ಕೆ ಉಪಯೋಗಿಸುವ ಇನ್ನೊಂದು ಸಾಧ್ಯತೆಯು ಪೈನ್ ಮರಗಳಿಂದ ಪಡೆಯುವ ಓಲಿಯೋರೆಸಿನ್‌ನ ಉಪಯೋಗಕ್ಕೆ ಸಂಬಂಧಿಸಿದುದು. ಸದ್ಯ ಇದು ಕೇವಲ ಕಾಲ್ಪನಿಕವಾಗಿದೆ. ಆದರೆ ಓಲಿಯೋರೆಸಿನನ್ನು ರಾಸಾಯನಿಕ ಪ್ರಕ್ರಿಯೆಗಳಿಂದ ಹೈ ಒಕ್ಟೇನ್ ಗ್ಯಾಸೊಲಿನ್‌ಗೆ ಪರಿವರ್ತಿಸಲು ಸಾಧ್ಯವೆಂದು ವಿಜ್ಞಾನಿಗಳು ಭಾವಿಸುತ್ತಾರೆ.

ಪಾರಾಕ್ವೆಟ್ ಎಂಬ ಕಳೆನಾಶಕವನ್ನು ಪಯೋಗಿಸಿದರೆ ಮರಗಳು ಹೆಚ್ಚು ಓಲಿಯೋರೆಸಿನನ್ನು ಉತ್ಪಾದಿಸುವುವೆಂದು ಇತ್ತೀಚೆಗೆ ಕಂಡುಹಿಡಿಯಲಾಗಿದೆ. ಪೈನ್ ಮರಗಳ ಮೇಲೆ ಈ ಕಳೆನಾಶಕವನ್ನು ಪಯೋಗಿಸಿದ ನಂತರ ಅವು ಓಲಿಯೋರೆಸಿನ್‌ನಿಂದ ಒದ್ದೆಯಾದವು. ಮರಗಳಲ್ಲಿ ಓಲಿಯೋರೆಸಿನ್ ಉತ್ಪಾದನೆಯನ್ನು ಹೆಚ್ಚಿಸುವುದೆಂದು ಈಗ ವಿಜ್ಞಾನಿಗಳಿಗೆ ತಿಳಿದಿರುವ ಏಕೈಕ ರಾಸಾಯನಿಕ ಪಾರಾಕ್ವೆಟ್.

ಮರಗಳು ಪಾರಾಕ್ವೆಟ್‌ಗೆ ಏಕೆ ಈ ರೀತಿ ಪ್ರತಿಕ್ರಿಯೆ ತೋರಿಸುತ್ತಿವೆ ಎಂಬ ಬಗೆಗೆ ಮತ್ತು ಈ ರಾಸಾಯನಿಕವನ್ನು ಉಪಯೋಗಿಸಿದ ನಂತರ ಮರದಲ್ಲಿ ಸಂಭವಿಸುವ ಜೀವರಾಸಾಯನಿಕ ಪ್ರಕ್ರಿಯೆಗಳ ಬಗೆಗೆ ಅಮೆರಿಕದ ಸಂಶೋಧಕರು ಅಧ್ಯಯನ ನಡೆಸುತ್ತಿದ್ದಾರೆ. ಪ್ರಯೋಗ ನಳಿಕೆಗಳಲ್ಲಿ ಬೆಳೆಯುತ್ತಿರುವ ಪೈನ್ ಕೋಶಗಳ ಅಂಗಾಂಶಗಳ ಮೇಲೆ ಮತ್ತು ಚಿಕ್ಕ ಚಿಕ್ಕ ಮರಗಳ ಮೇಲೆ ಪಾರಾಕ್ವೆಟ್‌ನ ಪರಿಣಾಮಗಳನ್ನು ಅಭ್ಯಸಿಸಿ ವಿಜ್ಞಾನಿಗಳು ಪ್ರಯೋಗ ಕಾರ್ಯವನ್ನು ತ್ವರೆಗೊಳಿಸುವ ನಿರೀಕ್ಷೆಯಲ್ಲಿದ್ದಾರೆ.

ಎಲ್ಲ ಪೈನ್‌ಗಳಲ್ಲಿ ಓಲಿಯೋರೆಸಿನ್ ಇರುವುದರಿಂದ, ಶಕ್ತಿ ತೋಟಗಳನ್ನುಪಯೋಗಿಸಿ ಹೆಚ್ಚಿನ ಪ್ರಮಾಣದಲ್ಲಿ ಇದನ್ನು ಉತ್ಪಾದಿಸಬಹುದು. ಈಗ ಪ್ರತಿ ವರ್ಷ ಪೈನ್ ಮರಗಳಿಂದ 45 ಕೋಟಿ ಕಿಲೋಗ್ರಾಂಗಳಷ್ಟು ಓಲಿಯೋರೆಸಿನನ್ನು ಪಡೆಯಲಾಗುತ್ತಿದೆ. ಅಮೆರಿಕದ ಆಗ್ನೇಯ ಪ್ರದೇಶದ ಎಲ್ಲ ಪೈನ್ ಮರಗಳಿಗೆ ಮರಗಳಿಗೆ ಪಾರಾಕ್ವೆಟ್ ಉಪಯೋಗಿಸಿದರೆ 410 ಕೋಟಿ ಕಿಲೋಗ್ರಾಂಗಳಷ್ಟು ಓಲಿಯೋರೆಸಿನನ್ನು ಉತ್ಪಾದಿಸಬಹುದು ಎಂದು ಅಂದಾಜುಮಾಡಲಾಗಿದೆ.

ಈಗ ಟರ್ಪೆಂಟೈನ್ ಮತ್ತು ನೇವಲ್ ಸ್ಟೋರ್ಸ್ ಮುಂತಾದ ಬಳಕೆಗಳಿಗೆ ಓಲಿಯೋರೆಸಿನ್ ಹೆಚ್ಚು ಉಪಯೋಗವಾಗುತ್ತಿದೆ. ಭವಿಷ್ಯದಲ್ಲಿ ಇದು ಪ್ಲಾಸ್ಟಿಕ್ ಮತ್ತು ಇತರ ಅನೇಕ ಉತ್ಪಾದನೆಗಳಲ್ಲಿ ಪೆಟ್ರೋಲಿಯಂಗೆ ಬದಲಿಯಾಗಿ ಉಪಯುಕ್ತವಾಗಬಹುದು.

ಮೂರನೆಯ ಯೋಜನೆಯು ಸೆಲ್ಯುಲೋಸನ್ನು ಮೇಥೇನಿಗೆ ಜೈವಿಕ ಕ್ರಿಯೆಗಳಿಂದ ಪರಿವರ್ತಿಸುವುದಕ್ಕೆ ಸಂಬಂಧಿಸಿದೆ. ನೈಸರ್ಗಿಕ ಅನಿಲದ ಮುಖ್ಯಾಂಶವಾಗಿರುವ ಮೇಥೇನ್ ಶೀಘ್ರವಾಗಿ ಕ್ಷಯಿಸುತ್ತಿದೆ.

1659ರಲ್ಲಿ ಇಂಗ್ಲೆಂಡಿನಲ್ಲಿ ಕಂಡುಹಿಡಿದ ನಂತರ ನೈಸರ್ಗಿಕ ಅನಿಲವು ಶಕ್ತಿಮೂಲವಾಗಿ ಅಧಿಕಾಧಿಕ ಮಹತ್ವವನ್ನು ಪಡೆಯಲಾರಂಭಿಸಿತು. 1960ರಲ್ಲಿ ನೈಸರ್ಗಿಕ ಅನಿಲವು ಪ್ರಪಂಚದಲ್ಲಿ ಬಳಸಲಾದ ಶಕ್ತಿಯ ಶೇಕಡ 14.6 ಅಂಶದಷ್ಟಿತ್ತು.

ಅಮೆರಿಕದ ಅನೇಕ ಪ್ರದೇಶಗಳಲ್ಲಿ ನೈಸರ್ಗಿಕ ಅನಿಲಕ್ಕಿರುವ ಬೇಡಿಕೆಯನ್ನು ನಿಭಾಯಿಸಲು ಕಸಕಡ್ಡಿಯನ್ನು ಮೆಥೇನ್‌ಗೆ ಪರಿವರ್ತಿಸಲು ಹುದುಗುವಿಕೆಯನ್ನು ಬಳಸಲಾಗಿದೆ. ಹುದುಗುವ ಕ್ರಿಯೆಯ ಮೂಲಕ ಸೂಕ್ಷ್ಮಾಣುಜೀವಿಗಳು ಸೆಲ್ಲುಲೋಸನ್ನು ಮೆಥೇನಾಗಿ ಪರಿವರ್ತಿಸುತ್ತವೆ.

ಸೂಕ್ಷ್ಮಾಣುಜೀವಿಗಳು ಸೆಲ್ಲುಲೋಸನ್ನು ಹೇಗೆ ಮೆಥೇನಾಗಿ ಪರಿವರ್ತಿಸುತ್ತವೆ ಎಂಬುದನ್ನು ಅಮೆರಿಕದ ವಿಜ್ಞಾನಿಗಳು ಅಭ್ಯಸಿಸುತ್ತಿದ್ದಾರೆ. ಸೆಲ್ಲುಲೋಸ್ ಜೈವಿಕ ರೀತಿಯಲ್ಲಿ ಹೇಗೆ ಮೆಥೇನಾಗುವುದು ಎಂದು ತಿಳಿಯುವುದು ಮುಖ್ಯ. ಇದನ್ನು ತಿಳಿದರೆ ಇನ್ನೂ ಹೆಚ್ಚು ಮೇಥೇನನ್ನು ಉತ್ಪಾದಿಸಲು ಹುದುಗುವ ಕ್ರಿಯೆಯನ್ನು ಅಳವಡಿಸಿಕೊಳ್ಳಲು ಸಾಧ್ಯವಾದೀತು.

— —

ಪ್ರಭಾತ ಭವಿಷ್ಯ

ಎಸ್. ಸುಬ್ರಾಯನ್

ತಾ. 26-9-76ರಿಂದ 2-10-1976ರ ವರೆಗೆ

ಮೇಷ:

ಎಲ್ಲ ಕೆಲಸಗಳು ಸಾವಕಾಶವಾಗುತ್ತವೆ. ಮಾನಸಿಕ ಶಾಂತಿಯು ಕಡಮೆಯಾಗಿರುವುದು. ಕುಟುಂಬದ ವಾತಾವರಣದಲ್ಲಿ ಕಲುಷತೆ ಇರುತ್ತದೆ. ಉತ್ತಮ ಗೆಳೆಯರ ಕೂಟ ಸಹಾಯ ಉನ್ನತಿಗಿರುವ ಸಂಘಟನೆಗಳಾಗುವವು. ಧಾರ್ಮಿಕ ವಿಚಾರಗಳಲ್ಲಿ ಆಸಕ್ತಿಯನ್ನು ಹೊಂದಿದವರಾಗಿರುವಿರಿ. ರಿಕಾರ್ಡು ವ್ಯವಹಾರಗಳು ಅಪೂರ್ಣಗಳಾಗಿಯೇ ಕಂಡುಬರುವವು. ದೂರಗತ ಬಂಧುಜನರ ಭೇಟಿ ಸಹಾಯಗಳಾಗಲಿವೆ.

ವೃಷಭ:

ಹಲವಾರು ವಿಚಾರಸಂಪರ್ಕದಿಂದ ಕೂಡಿರುವಿರಿ. ಸಂಪತ್ತಿನ ವಿಷಯದ ಕಡೆಗೆ ಗಮನಗೊಂಡು ನೆಲಸಿರುವಿರಿ. ಅದಕ್ಕಾಗಿ ಹಲವಾರು ಮಾಯಾಜಾಲಗಳನ್ನು ಒಡ್ಡಲು ಹೊರಡುವಿರಿ. ಇದರಿಂದ ನಿಮ್ಮ ಕಾರ್ಯವು ಕೈಗೂಡಿ ಬರುವುದಾದರೂ ಅದೊಮ್ಮೆ ಶಾಂತಿಯನ್ನು ಹೊಂದಿದವರಾಗುವಿರಿ. ರಿಕಾರ್ಡು ವ್ಯವಹಾರಗಳು ಅಪೂರ್ಣಗಳಾಗಿಯೇ ಕಂಡುಬರುವವು. ದೇಹಾರೋಗ್ಯದ ನೆಲೆ ಚೆನ್ನಾಗಿರುವುದಿಲ್ಲ. ಕುಟುಂಬೀಯರ ವಿಯೋಗವನ್ನು ಹೊಂದಲಿರುವಿರಿ.

ಮಿಥುನ:

ಹಿಂದುಳಿದ ಕೆಲಸಗಳು ಸರಿಗೊಂಡು ಪ್ರಗತಿಗೆ ಬರಲಿರುವ ಅವಕಾಶವಾಗುತ್ತದೆ. ಆಕಸ್ಮಿಕ ಘಟನೆಗಳಿಂದ ಕೂಡಿದವರಾಗಿರುವಿರಿ. ರಿಕಾರ್ಡು ವ್ಯವಹಾರಗಳು ಅನುಕೂಲಕ್ಕೆ ಬರುವವು. ದೂರಗತ ಬಂಧುಜನರ ಭೇಟಿಯಾಗಲಿದೆ. ಹಿರಿಯರ ಸುಖವಾರ್ತೆಯನ್ನು ಹೊಂದಲಿರುವಿರಿ. ದೇಹಾರೋಗ್ಯ ವಿಷಯದಲ್ಲಿ ವ್ಯಯವಿರುತ್ತದೆ. ಪ್ರವಾಸವನ್ನು ಮಾಡಲಿರುವ ಸಂಭರ್ವವಿದೆ.

ಕರ್ಕಟಕ:

ಹಲವಾರು ವಿಚಾರತರಂಗಗಳು ನಿಮ್ಮಲ್ಲಿ ಮೂಡಿಬರುವವು. ಮನಸ್ಸು ಕಲುಷಿತವಾಗಿದ್ದು ಯಾವ ಕೆಲಸಗಳೂ ಕುಚಿ ಇರದೆ ಕಂಡುಬರುವವು. ರಿಕಾರ್ಡು ವ್ಯವಹಾರಗಳು ಬಹಳವಾಗಿ ದ್ವಿತೀಯದ ರವಿಯಿಂದ ಕಂಡುಬರುವವು. ಆಕಸ್ಮಿಕ ಘಟನೆಗಳು ಕುಟುಂಬದಲ್ಲಿರುವವು.

ಸಿಂಹ:

ಎಲ್ಲ ಕೆಲಸಗಳೂ ಸಾವಕಾಶವಾಗಿಯೇ ನಡೆಯುವವು. ಕುಟುಂಬೀಯರಿಂದ ಮಾನಸಿಕ ಶಾಂತಿ ಕಡಮೆಯಾಗಿರುತ್ತದೆ. ದೇವತಾನುಗ್ರಹದಿಂದ ನಿಮ್ಮ ಕಷ್ಟಗಳು ಬಗೆಹರಿದು ಸುಖ ಪರಿಣಾಮವಾಗಲಿರುವುದು. ದೇಹಾರೋಗ್ಯ ವಿಷಯದಲ್ಲಿ ಕುಟುಂಬದಲ್ಲಿ ವ್ಯಯವಿರುತ್ತದೆ. ಪ್ರವಾಸವಿದೆ.

ಕನ್ಯಾ:

ನಿಮಗೆ ಲಾಭದ ಶನಿಯು ಆರ್ಥಿಕ ಸುಖವನ್ನು ಕೊಡುವನಾದರೂ ಸಂಪತ್ತಿನ ವ್ಯಯವು ಒಳ್ಳೆಯದಕ್ಕಾಗಿ ಕಡಮೆ ವ್ಯಯವಾಗುವುದು. ದೊಡ್ಡ ದೊಡ್ಡ ವಿಚಾರಕಲ್ಪನೆಗಳಿಂದ ಕೂಡಿದವರಾಗಿ ನೆಲಸುವಿರಿ. ವಿದ್ಯಾರ್ಥಿಗಳು ಪ್ರಗತಿಯನ್ನು ಹೊಂದಲಿರುವರು. ಪ್ರವಾಸಕ್ಕಿರುವ ಸಂಘಟನೆ ಕಂಡುಬರುವುದು.

ತುಲಾ:

ಉತ್ತಮ ವಿಚಾರ ಸಂಪರ್ಕಗೊಂಡು ಅಭಿವೃದ್ಧಿಯ ಮಾರ್ಗಕ್ಕೆ ಇಳಿಯುವವರಾಗುವಿರಿ. ದ್ವಾದಶದ ರವಿಯು ನಿಮಗೆ ಯಾವ ಪರಿಣಾಮವನ್ನೂ ಉಂಟುಮಾಡುವವನಲ್ಲ. ಎಂಟರ ಗುರು ನಷ್ಟಾಂಶ ಸಂಪತ್ತಿನ ಕೂಡಿಕೆಗೆ ಅವಕಾಶವನ್ನು ಕೊಡಲಿರುವನು. ಪ್ರವಾಸವಿದೆ.

ವೃಶ್ಚಿಕ:

ಮಹತ್ವದ ವಿಚಾರ ಸಂಘಟನೆಗಳಿರುತ್ತವೆ. ಅವುಗಳನ್ನು ಬಗೆಹರಿಸಿ ಅಭ್ಯುದಯದ ಸಿದ್ಧಿಯನ್ನು ಹೊಂದಲಿರುವಿರಿ. ರಿಕಾರ್ಡು ವ್ಯವಹಾರಗಳು ಸಾವಕಾಶವಾಗಿ ನಡೆಯುವವು. ವಾಸಸ್ಥಾನದ ಬದಲಾವಣೆಗಿರುವ ಸಂಘಟನೆ ಕಂಡುಬರುವುದು.

ಧನು:

ನೀವು ನಿಮ್ಮ ಮನಸ್ಸಿನಲ್ಲಿ ಭಿನ್ನ ಭಿನ್ನ ವಿಚಾರತೃಷ್ಣೆಯನ್ನು ಹೊಂದಿ ಸ್ವಾರ್ಥಸಾಧನೆಯನ್ನು ಮಾಡಲಿರುವ ಯೋಜನೆ ಹೊಂದುವಿರಿ. ಸಂಪತ್ತಿನ ವಿನಿಯೋಗ ಬಹಳವಾಗಿರುತ್ತದೆ. ಕುಜನು ಅವಘಡ ಭೀತಿಯನ್ನುಂಟು ಮಾಡಲಿರುವನು.

ಮಕರ:

ಹೊಸ ಯೋಜನೆಯನ್ನು ಹೊಂದಿದವರಾಗಿ ಕಂಡುಬರುವಿರಿ. ಕುಟುಂಬದಲ್ಲಿ ದೇಹಾರೋಗ್ಯಕ್ಕಾಗಿ ಧನವ್ಯಯವಿರುತ್ತದೆ. ಧಾರ್ಮಿಕ ವಿಷಯಗಳ ಕಡೆಗೆ ಗಮನವನ್ನು ಹೊಂದಿದವರಾಗಿರುವಿರಿ. ವಿದ್ಯಾಜೀವನದವರು ಅಭಿವೃದ್ಧಿಯನ್ನು ಹೊಂದಿದವರಾಗುವರು.

ಕುಂಭ:

ನಿಮ್ಮ ಮನಸ್ಸು ಯಾವಾಗಲೂ ಊರ್ಜಿತದ ಚಿಂತನೆಗೊಂಡು ನೆಲಸಿ ಅಭಿವೃದ್ಧಿಯ ನಿರ್ಮಾಣವಾಗುತ್ತಿರುವುದು. ಬಂಧುವರ್ಗೀಯರ ಕೂಡಿಕೆ ಸಹಾಯ ಸಂಪರ್ಕಗಳು ಸಿದ್ಧಿಸಲಿರುತ್ತವೆ. ಪ್ರವಾಸಾಸಕ್ತರಾಗಿ ಕಾಣುವಿರಿ.

ಮೀನ:

ನಿರಂತರ ಭಿನ್ನ ಭಿನ್ನ ಕೆಲಸಗಳಿಂದ ಕೂಡಿರುವಿರಿ. ಹಿರಿಯರ ಆರೋಗ್ಯಸುಖಕ್ಕಾಗಿ ಧನವ್ಯಯವಿರುತ್ತದೆ. ಪತ್ರವ್ಯವಹಾರಗಳು ಅಧಿಕವಾಗಿರುತ್ತವೆ. ಅಧಿಕಾರೀ ಜನರು ತಮ್ಮ ಕೆಲಸದಲ್ಲಿ ತಾಕಲಾಟವನ್ನು ಹೊಂದಲಿರುವ ಸಂಘಟನೆ ಕಂಡುಬರುವುದು. ಪ್ರಯಾಣವಿದೆ.

—o—

ಬೀಡಿ ಕೆಲಸಗಾರರ ತರಬೇತಿ

ಸಾವಿರ ಬೀಡಿಗಳನ್ನು ಕಟ್ಟಿದ್ದಕ್ಕೆ ರಾಷ್ಟ್ರೀಯ ಕನಿಷ್ಟ ವೇತನವಾಗಿ ರೂ. 8-50 ನಿರ್ಣಯಿಸಬೇಕು ಮತ್ತಿತರ ಕೇಳಿಕೆಗಳನ್ನೊಳಗೊಂಡ ಮನವಿಯೊಂದನ್ನು ಕಳೆದ ತಾ. 20ರಂದು ದಕ್ಷಿಣ ಕನ್ನಡ ಜಿಲ್ಲಾ ಬೀಡಿ ಕೆಲಸಗಾರರು ಮಂಗಳೂರಲ್ಲಿ ಅಸಿಸ್ಟಾಂಟ್ ಕಮಿಷನರರಿಗೆ ಒಪ್ಪಿಸಿರುವರು. ಮನವಿಯನ್ನು ಒಪ್ಪಿಸುವುದಕ್ಕೆ ಮೊದಲು ದ. ಕ. ಬೀಡಿ ಕೆಲಸಗಾರ ಫೆಡರೇಶನ್ ಆಶ್ರಯದಲ್ಲಿ ಬೀಡಿ ಕೆಲಸಗಾರರ ಮೆರವಣಿಗೆಯೊಂದು ನಡೆದಿತ್ತು.

ಶಿಕ್ಷಕರಲ್ಲಿ ಜಿಲ್ಲಾಧಿಕಾರಿಯವರ ಕರೆ

"ಚಿಕ್ಕ ಉಳಿತಾಯ ಸಂಗ್ರಹದಲ್ಲಿ ಶಿಕ್ಷಕರು ತೀವ್ರ ಆಸಕ್ತಿ ತಾಳಬೇಕು ಮತ್ತು ವಿದ್ಯಾರ್ಥಿಗಳಲ್ಲಿಯೂ ಉಳಿತಾಯದ ಅಭ್ಯಾಸ ಬೆಳೆಸಬೇಕು", ಎಂಬುದಾಗಿ ದ. ಕ. ಜಿಲ್ಲಾಧಿಕಾರಿ ಶ್ರೀ ಬಿ. ಎಸ್. ಪಾಟೀಲರು ತಾ. 20ರಂದು ಹೈಸ್ಕೂಲು ಮತ್ತು ಪ್ರೈಮರಿ ಶಾಲಾ ಶಿಕ್ಷಕರ ಉಳಿತಾಯ ತರಬೇತಿಯ ಎರಡನೆ ಶಿಬಿರವನ್ನು ಉದ್ಘಾಟಿಸುತ್ತ ಕರೆಯಿತ್ತರು.

ಆಹಾರವಸ್ತುಗಳ ಬಿಡುಗಡೆ

ಸಪ್ಟೆಂಬರ್ ತಿಂಗಳಿಗೆ ಈ ಕೆಳಕಂಡ ಪ್ರಮಾಣದಲ್ಲಿ ಆಹಾರಸಾಮಗ್ರಿಗಳನ್ನು ದ. ಕ. ಜಿಲ್ಲೆಯಲ್ಲಿ ಬಿಡುಗಡೆಮಾಡಲಾಗಿದೆ:

ಅಕ್ಕಿ—50,000 ಕ್ವಿಂಟಾಲ್, ಗೋದಿ—7,000 ಕ್ವಿಂಟಾಲ್, ಮೈಲೋ-6,000 ಕ್ವಿಂಟಾಲ್, ಸಕ್ಕರೆ—5,400 ಕ್ವಿಂಟಾಲ್, ಮೈದಾ—1,711 ಕ್ವಿಂಟಾಲ್, ಸೋಜಿ—622 ಕ್ವಿಂಟಾಲ್ ಮತ್ತು ಆಟ್ಟಾ—256 ಕ್ವಿಂಟಾಲ್.

ಮಂಗಳೂರು ರೋಟರಿ ಕ್ಲಬ್ ಸಭೆ

ಮಂಗಳೂರು ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ತಾ. 23ರಂದು ಮೋತಿಮಹಲಿನಲ್ಲಿ ರೋ। ಬಿ. ದಾಮೋದರ ಪ್ರಭುರವರ ಅಧ್ಯಕ್ಷತೆಯಲ್ಲಿ ಜರಗಿದಾಗ, ಡಾ। ಕೆ. ಎಸ್. ಮಣಿ, ಪ್ರೊಫೆಸರ್ ಆಫ್ ನ್ಯೂರೊಲೊಜಿ, ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಎಂಡ್ ನ್ಯೂರೋ ಸಾಯನ್ಸಸ್, ಬೆಂಗಳೂರು ಇವರು ಮುಖ್ಯ ಅತಿಥಿಯಾಗಿ ಅಪಸ್ಮಾರ ರೋಗ, ಅದರ ಚಿಕಿತ್ಸಾವಿಧಾನಗಳು, ಅದರ ಸಾಮಾಜಿಕ ಪ್ರತಿಕ್ರಿಯೆ ಇವೇ ಮೊದಲಾದ ವಿಚಾರಗಳ ಕುರಿತು ವಿವರಿಸಿ ಭಾಷಣ ಮಾಡಿದರು. ಮುಖ್ಯ ಅತಿಥಿಗಳ ಪರಿಚಯವನ್ನು ರೋ। ಡಾ। ಸಿ. ಆರ್. ಕಾಮತರು ಮಾಡಿಕೊಟ್ಟಿದ್ದು ಕೊನೆಯಲ್ಲಿ ರೋ। ಡಾ। ಎ. ವಿ. ಶೆಟ್ಟರು ಧನ್ಯವಾದಗಳನ್ನರ್ಪಿಸಿದರು. ಮಂಗಳೂರಲ್ಲಿ ಇನ್ನೊಂದು ರೋಟರಿ ಕ್ಲಬ್ (ಮಂಗಳೂರು ದಕ್ಷಿಣ) ಸ್ಥಾಪಿಸುವ ಬಗ್ಗೆ ಆವಶ್ಯಕ ಕಾರ್ಯಕ್ರಮಗಳನ್ನು ಕೈಕೊಳ್ಳಲು ಮಂಗಳೂರು ರೋಟರಿ ಕ್ಲಬ್ಬಿನ ಹಿರಿಯ ಸದಸ್ಯ ರೋ। ಎಂ. ಜಿ. ಕಾಮತರನ್ನು ಜಿಲ್ಲಾ ಗವರ್ನರರು ತಮ್ಮ ವಿಶೇಷ ಪ್ರತಿನಿಧಿಯನ್ನಾಗಿ ನೇಮಿಸಿರುವುದನ್ನು ಈ ಸಂದರ್ಭದಲ್ಲಿ ಘೋಷಿಸಲಾಯಿತು.

—o—

NOTICE

Munsif Court, Mangalore.

S. C. No. 96/1976.

Corporation Bank Ltd...Plaintiff.

B. Babanna and another .... Defendants.

To 2nd Defendant–

B. Janardhana Rao, Merchant, Near Marigudi, Bolar, Mangalore-1.

Please take notice that the above suit filed for recovery of the amount due is posted to 13–10–1976. If you fail to appear on that date at 11 A. M., the matter will be proceeded with, declaring you exparte.

(By order of the Court)

M. V. S. Bhat,
Advocate for Plaintiff.

Mangalore, 3-9-1976.

NOTICE

Munsif's Court Mangalore

S. C. 105/1976.

Syndicate Bank ... Plaintiff

and

Venkappa Balappa Poojary & another ... Defendants.

To 2nd defendant,

M. Madhava S/o Rama, Garage owner, Asia Auto Works, Attavara, Nandigudda Road, Mangalore-1.

Please take notice that the above suit filed for recovery of amount is posted to 16-10-1976. If you fail to appear on that date at 11 A. M. the matter will be proceeded with declaring you exparte.

U. R. KINI,
Advocate for Plaintiff.

Mangalore, 7-9-1976

ಮೂಡಬಿದರೆಯಲ್ಲಿ ದಸರಾಮಹೋತ್ಸವ

ಮೂಡಬಿದರೆಯ ಸಮಾಜಮಂದಿರದ ಆಶ್ರಯದಲ್ಲಿ ಸಪ್ಟೆಂಬರ್ 24ರಿಂದ ಅಕ್ಟೋಬರ್ 3ರ ವರೆಗೆ 31ನೇ ದಸರಾಮಹೋತ್ಸವವು ವಿವಿಧ ಕಾರ್ಯಕ್ರಮಗಳಿಂದ ನಡೆಯಲಿದೆ. 'ಉದಯವಾಣಿ' ದೈನಿಕದ ಉಪಸಂಪಾದಕ ಶ್ರೀ ಬನ್ನಂಜೆ ಗೋವಿಂದಾಚಾರ್ಯರು ತಾ. 24ರಂದು ಉತ್ಸವದ ಉದ್ಘಾಟನೆ ನಡೆಸಿರುವರು.

ಜಿಲ್ಲಾ ಕೊಂಗ್ರೆಸ್ ಮೈನಾರಿಟಿ ಸಮ್ಮೇಳನ

ದ. ಕ. ಜಿಲ್ಲಾ ಕೊಂಗ್ರೆಸ್ ಮೈನಾರಿಟಿ ಸೆಲ್ ಆಶ್ರಯದಲ್ಲಿ ಜರಗಿದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಬರುವ ನವೆಂಬರ್ ತಿಂಗಳಲ್ಲಿ ಜಿಲ್ಲಾ ಮಟ್ಟದ ಮೈನಾರಿಟಿ ಸಮಿತಿಯ ಮಹಾಸಮ್ಮೇಳನವನ್ನು ಜರಗಿಸುವ ನಿರ್ಣಯವಾಗಿದೆ.

NOTICE

Civil Judge's Court,
Mangalore.

S. C. 97/76.

Canara Bank ... Plaintiff.
and
K. Laxman Achary and
another ... Defendants.

To The 1st Defendant
K. Laxman Achary, Jeweller,
C/o K. Narayana Achary,
Car Street, Mangalore-1.

Please take notice that the suit filed by the Bank against you for recovery of amounts due is posted to 16—10—1976 for your appearance. If you fail to appear on that day at 11 A. M., the matter will be decided declaring you exparte.

(By order of the Court)

S. S. ULLAL,
Advocate for Plaintiff.
Mangalore, 11-9-1976.

NOTICE

Civil Judge's Court,
Mangalore.

S. C. 96/76.

Canara Bank ... Plaintiff
and
K. Vidyananda Jain &
another ---- Defendants.

To The 1st Defendant,
K. Vidyananda Jain,
Idu Village,
Belthangady Taluk, S. K.

Please take notice that the suit filed by the Bank against you for recovery of amounts due is posted to 16—10—1976 for your appearance. If you fail to appear on that day at 11 A. M. the matter will be decided declaring you exparte.

(By order of the Court]

S. S. ULLAL,
Advocate for Plaintiff.
Mangalore, 12-9-1976.

ಮಂಗಳೂರು ಉತ್ತರ ವಿಭಾಗದಲ್ಲಿ ಶ್ರೀ ಶಾರದಾ ಪೂಜೆ

ಶ್ರೀ ಎಂ. ಬಿ. ನಾಥ್ ಮತ್ತು ಶ್ರೀ ಎಸ್. ಜಿ. ಭಟ್‌ರವರು ವರ್ಷಂಪ್ರತಿ ನಡೆಸಿಕೊಂಡು ಬರುತ್ತಿರುವ ಶ್ರೀ ಶಾರದಾ ಪೂಜೆಯು, ತಾ. 30—9—76ನೇ ಗುರುವಾರ, ಗಾಂಧೀನಗರದಲ್ಲಿರುವ ಸಮಾಜ ಭವನದಲ್ಲಿ ಶ್ರೀ ಶಾರದಾ ವಿಗ್ರಹ ಪ್ರತಿಷ್ಠೆಯಿಂದ ಆರಂಭವಾಗಿ, ತಾ. 3-10-76ನೇ ರವಿವಾರದ ವರೆಗೆ ಮಹಾಪೂಜಾದಿ ಕಾರ್ಯಕ್ರಮಗಳು ನಡೆದು ತಾರೀಕು 4—10—76ನೇ ಸೋಮವಾರ ಸಾಯಂಕಾಲ 4-30ಕ್ಕೆ ಶ್ರೀ ಶಾರದಾ ವಿಗ್ರಹವನ್ನು ಉರ್ವ ಕೆನರಾ ಹೈಸ್ಕೂಲ್ ಸಿಟಿ ಮೈದಾನ್, ಉರ್ವ ಮಾರ್ಕೆಟ್, ಮಠದಕಣಿ ರಸ್ತೆಯಾಗಿ ಬೋಳೂರಿನ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದ ವರಾಹ ತೀರ್ಥದಲ್ಲಿ ವಿಸರ್ಜಿಸಲಾಗುವುದು; ಭಕ್ತಾದಿಗಳು ಪ್ರತಿದಿನ ಆಗಮಿಸಿ ಪೂಜಾದಿಗಳಲ್ಲಿ ಪಾಲ್ಗೊಂಡು, ಸದ್ವಿದ್ಯೆ-ಸತ್ಸಂಪತ್ತುಗಳಿಗಾಗಿ ಪ್ರಾರ್ಥಿಸಿ ವಿದ್ಯಾಧಿದೇವತೆಯ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ, ಶ್ರೀ ಎಂ. ಬಿ. ನಾಥ್‌ರವರು ವಿನಂತಿಸಿಕೊಳ್ಳುತ್ತಾರೆ.

"ಯುಗಪುರುಷ" ಮಾಸಪತ್ರಿಕೆಯ ತ್ರಿದಶಮಾನೋತ್ಸವ

ಕಿನ್ನಿಗೋಳಿಯ "ಯುಗಪುರುಷ" ಮಾಸಪತ್ರಿಕೆಯು ಇದೇ ಅಕ್ಟೋಬರ ತಿಂಗಳಿಂದ 1977ನೇ ಅಕ್ಟೋಬರ ವರೆಗಿನ ವರ್ಷವನ್ನು 'ತ್ರಿದಶಮಾನೋತ್ಸವ ವರ್ಷ'ವಾಗಿ, ಆಚರಿಸಲು ನಿರ್ಧರಿಸಿದೆ. ಅಕ್ಟೋಬರದಲ್ಲಿ ವಿಶೇಷಾಂಕ ಪ್ರಕಟಣೆ, 'ಯುಗಪುರುಷ'ದ ಕುರಿತು ವಿಶೇಷ ರೀತಿಯಲ್ಲಿ ಸಹಕರಿಸಿದ ಪ್ರಮುಖರಿಗೆ ಸನ್ಮಾನ, ಕನ್ನಡ ಗ್ರಂಥಗಳ ಮತ್ತು ಪತ್ರಿಕೆಗಳ ಪ್ರದರ್ಶನ, ಕಿನ್ನಿಗೋಳಿಯಲ್ಲೊಂದು ಪುಸ್ತಕ ಭಂಡಾರ ರಚನೆ ಮೊದಲಾದ ಕಾರ್ಯಕ್ರಮಗಳನ್ನು ರೂಪಿಸಿದೆ.

ಇಂಜಿನಿಯರರ ದಿನಾಚರಣೆ

ಭಾರತರತ್ನ ಎಂ. ವಿಶ್ವೇಶ್ವರಯ್ಯನವರ 116ನೇ ಜನ್ಮದಿನವನ್ನು ಕೊಡಗು ಮತ್ತು ದಕ್ಷಿಣ ಕನ್ನಡ ಎಂಜಿನಿಯರರ ಸಂಘ ಮತ್ತು ಇನ್ಸ್‌ಟಿಟ್ಯೂಟ್ ಆಫ್ ಎಂಜಿನಿಯರ್ಸ್(ಇಂಡಿಯಾ) ಇದರ ಮಂಗಳೂರು ಉಪಕೇಂದ್ರದವರು ಜೊತೆಯಲ್ಲಿ ಕಳೆದ ತಾ. 19ರಂದು ಸಂಜೆ ಮಂಗಳೂರು ಪುರಭವನದಲ್ಲಿ 'ಎಂಜಿನಿಯರರ ದಿನ'ವನ್ನಾಗಿ ಆಚರಿಸಿದರು. ನವ ಮಂಗಳೂರು ಬಂದರಿನ ಆಡಳಿತಾಧಿಕಾರಿ ಶ್ರೀ ಎಚ್. ಕೆ. ಪಂಡಿತಾರಾಧ್ಯರ ಅಧ್ಯಕ್ಷತೆಯಲ್ಲಿ ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನಿನ ರಿಜಿಸ್ಟ್ರಾರ್ ಪದ್ಮಶ್ರೀ ಡಾ| ಟಿ ಎಮ್. ಎ. ಪೈಯವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದು, ಪೈಯವರನ್ನು 'ದಕ್ಷಿಣ ಕನ್ನಡ ಜಿಲ್ಲೆಯ ವಿಶ್ವೇಶ್ವರಯ್ಯ' ಎಂದು ಶುಭಾಶಯಗಳನ್ನು ಸಲ್ಲಿಸಿ, ಗಂಧದ ಚೌಕಟ್ಟಿನ ವಿಶ್ವೇಶ್ವರಯ್ಯನವರ ಭಾವಚಿತ್ರವನ್ನು ಅವರಿಗೆ ಶುಭಾಶಂಸನೆ ಕೊಡುಗೆಯಾಗಿ ನೀಡಿ ಸತ್ಕರಿಸಿ ಗೌರವಿಸಲಾಯಿತು.

ಕುಟುಂಬ ಕಲ್ಯಾಣ ಪಕ್ಷ

ಮಂಗಳೂರು ಸರಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಕುಟುಂಬ ಕಲ್ಯಾಣ ಯೋಜನಾ ಪಕ್ಷವನ್ನು ಕರ್ನಾಟಕದ ಮಹಿಳಾ ಮತ್ತು ಶಿಶುಕಲ್ಯಾಣ ಖಾತೆಯ ಸಹಾಯಕ ಸಚಿವೆ ಶ್ರೀಮತಿ ಮನೋರಮಾ ಮಧ್ವರಾಜ್ ಅವರು ತಾ. 16ರಂದು ಮುಂಜಾನೆ ಉದ್ಘಾಟಿಸಿದರು. "ಭಾರತದಂತಹ ದೇಶದಲ್ಲಿ ಜನಸಂಖ್ಯಾ ಸ್ಫೋಟನದ ಸಮಸ್ಯೆಯನ್ನು ಜನರು ಅರ್ಥಮಾಡಿಕೊಳ್ಳಬೇಕಾದುದು ಅತ್ಯಗತ್ಯ" ಎಂಬುದಾಗಿ ಸಚಿವೆಯರು ಈ ಸಂದರ್ಭದಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು. ಕರ್ನಾಟಕ ಬ್ಯಾಂಕಿನ ಚೆಯರ್ಮ್ಯಾನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಜಿಲ್ಲಾ ಸರ್ಜನ್ ಡಾ| ಎಚ್. ಸದಾನಂದ ಬಲ್ಲಾಳರು ಸ್ವಾಗತಿಸಿ ಅಂತ್ಯದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ| ಬಿ. ವಿ. ರಾಜಣ್ಣ ಅವರು ಧನ್ಯವಾದವಿತ್ತರು.

ರೋಟರ್‍ಯಾಕ್ಟ್ ಕ್ಲಬ್

ಮಂಗಳೂರು ಉತ್ತರ ರೋಟರಿ ಕ್ಲಬ್ಬಿನ ಅಧ್ಯಕ್ಷ ಶ್ರೀ ಆರ್. ಎನ್. ಮಣೇಲರು ಕೆನರಾ ಕೊಲೇಜಿನ ರೋಟರ್‍ಯಾಕ್ಟ್ ಕ್ಲಬ್ಬನ್ನು ಇತ್ತೀಚೆಗೆ ಉದ್ಘಾಟಿಸಿದರು.

ಮಕ್ಕಳನ್ನು ಕೆರೆಗೆ ನೂಕಿ ತಾಯಿಯ ಆತ್ಮಹತ್ಯೆ

ಕಾರ್ಕಳ ತಾಲೂಕಿನ ನೆಲ್ಲೂರು ಗ್ರಾಮದ ಮುಡ್ಕೊಳ್ಳಿಯಲ್ಲಿ ತಾಯಿಯೊಬ್ಬಳು ತನ್ನ ನಾಲ್ವರು ಮಕ್ಕಳನ್ನು ಕೆರೆಗೆ ನೂಕಿ ತಾನೂ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವೊಂದು ವರದಿಯಾಗಿದೆ.

ಜಿಲ್ಲೆಯ ಭೂತಾರಾಧನೆ

ದಕ್ಷಿಣ ಕನ್ನಡ ಜಿಲ್ಲೆಯ ಜನಜೀವನದಲ್ಲಿ ಭೂತಾರಾಧನೆಯು ಮಹತ್ತರ ಪಾತ್ರವಹಿಸಿದ್ದು, ಜನತೆಯ ಮಾನಸಿಕ ಮತ್ತು ಭಾವನಾತ್ಮಕ ವಿಚಾರಗಳಲ್ಲಿ ಪರಿಣಾಮಕಾರಿ ದೃಢವಿಶ್ವಾಸವನ್ನು ಕಲ್ಪಿಸಿದೆ ಎಂಬುದಾಗಿ ಚಿಕಾಗೊ ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಂಶೋಧಕಾ ತಜ್ಞೆ ಡಾ| ಮಾರ್ಥಾ ಆಶ್ಟನ್ ಅವರು ಇತ್ತೀಚೆಗೆ ಮಣಿಪಾಲದಲ್ಲಿ ಸಾಹಿತ್ಯ ಸಂಘದ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತ ತಿಳಿಸಿದರು.

ಸರಕಾರದ ಆಜ್ಞೆಗೆ ತಡೆಯಾಜ್ಞೆ

ಕುಂದಾಪುರ ನಗರಸಭೆಯನ್ನು ವಜಾಗೊಳಿಸಿ ಸರಕಾರದ ಆಡಳಿತಾಧಿಕಾರಿಯನ್ನು ನೇಮಿಸಿದ್ದ ರಾಜ್ಯ ಸರಕಾರದ ಸಪ್ಟಂಬರ್ ದಿನಾಂಕ 1ರ ಆಜ್ಞೆಯ ವಿರುದ್ಧ ನಗರಸಭಾಧ್ಯಕ್ಷ ಶ್ರೀ ಎಡ್ವಿನ್ ಕ್ರಾಸ್ತಾ ಅವರು ರಾಜ್ಯ ಹೈಕೋರ್ಟಿಗೆ ರಿಟ್ ಸಲ್ಲಿಸಿದ್ದು, ಅದನ್ನು ನ್ಯಾಯಾಧೀಶ ಜಸ್ಟೀಸ್ ಲಾಲ್ ಅವರು ಸ್ವೀಕರಿಸಿ ದಿನಾಂಕ 9ರಂದು ಸರಕಾರದ ಆಜ್ಞೆಗೆ ತಡೆಯಾಜ್ಞೆ ನೀಡಿದ್ದಾರೆಂದು ತಿಳಿದು ಬಂದಿದೆ.

ಧರ್ಮಗ್ರಂಥ ಕಂಠಪಾಠಸ್ಪರ್ಧೆ

ದ. ಕ. ಜಿಲ್ಲಾ ಕೊಂಗ್ರೆಸ್ ಸಮಿತಿ ಆಶ್ರಯದಲ್ಲಿ ಗಾಂಧಿಜಯಂತಿ ಆಚರಣೆ ಸಂಬಂಧವಾಗಿ ಶ್ರೀಮದ್ಭಗವದ್ಗೀತಾ, ಕುರಾನ್ ಮತ್ತು ಬೈಬಲ್‌ಗಳ ಕಂಠಪಾಠ ಸ್ಪರ್ಧೆಯನ್ನು ಏರ್ಪಡಿಸಲು ನಿರ್ಧರಿಸಲಾಗಿದ್ದು, ಈ ದಿನ (ತಾ. 26) ಈ ಸ್ಪರ್ಧೆ ಕಸ್ತೂರ್‌ಬಾ ಮೆಡಿಕಲ್ ಕೊಲೇಜ್ ಸಭಾಸದನದಲ್ಲಿ ನಡೆಯುವುದು.

PRABHAT, KANNADA WEEKLY, MANGALORE-575001
REGD. No. KRNL-8.

To

Printed at The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.